RNI.KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 80 ಪುಟ: 06 ಬುಧವಾರ 19-02-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh



ಅನುಪಮಾ ಕೈ ಹಿಡಿದ ನಟನ

ಮೈಸೂರಲ್ಲಿ ಕಿಚ್ಚನ ಕ್ರಿಕೆಟ್ ದಸರಾ

ಜೈಲರ್ 2ಗೆ ಸೂರ್ಯ ವಿಲನ್ ಪುಟ 6

# ಹಣದ ಬದಲು 10 ಕೆಜಿ ಅಕ್ಕಿ

## ಅನ್ನಭಾಗ್ಯ: ಫೆಬ್ರವರಿಯಿಂದಲೇ ಸಂಪೂರ್ಣ ಅಕ್ಕಿ ರಾಜ್ಯ ಸರ್ಕಾರ ತೀರ್ಮಾನ: ಮುನಿಯಪ್ಪ

**ಬೆಂಗಳೂರು:** ವಿಧಾನಸಭಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಘೋಷಿಸಿದ್ದ ಗ್ಯಾರಂಟಿಗಳಲ್ಲೊಂದಾದ ಅನ್ನಭಾಗ್ಯ ಯೋಜನೆ ಫಲಾನುಭವಿಗಳಿಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 10 ಕೆಜಿ ಅಕ್ಕಿ ಬದಲು 5 ಕೆ ಜಿ ಅಕ್ಕಿ, ಉಳಿದ 5ಕೆಜಿ ಅಕ್ಕಿಗೆ ಹಣ ನೀಡುವ ಯೋಜನೆ ರೂಪಿಸಿತ್ತು. ಫಲಾನುಭವಿಗಳಿಗೆ ಹಣ ಸಕಾಲಕ್ಕೆ ತಲುಪುತ್ತಿಲ್ಲ ಎಂಬ ದೂರಗಳು ವ್ಯಾಪಕವಾಗಿ ಕೇಳಿಬಂದ ಹಿನ್ನೆಲೆಯಲ್ಲಿ ಸರ್ಕಾರ ಹಣದ ಬದಲಿಗೆ ಅಕ್ಕಿಯನ್ನೇ ನೀಡಲು ತೀರ್ಮಾನಿಸಿದೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಚಿವ ಕೆ.ಎಚ್ ಮುನಿಯಪ್ಪ ಅವರು, ಇಷ್ಟು ದಿನಗಳ ಕಾಲ ಹೆಚ್ಚುವರಿ 5 ಕೆಜಿ ಅಕ್ಕಿಗೆ ಪರ್ಯಾಯವಾಗಿ 170 ರೂ. ಹಣ ನೀಡಲಾಗುತ್ತಿತ್ತು. ಇದೀಗ, ಹಣದ ಬದಲು 10 ಕೆಜಿ ಅಕ್ಕಿ ಕೊಡಲು ತೀರ್ಮಾನಿಸಿದ್ದು ಈ ತಿಂಗಳಿನಿಂದಲೇ ಇದನ್ನು ಕಾರ್ಯಗತಗೊಳಿಸಲಿದ್ದೇವೆ ಎಂದು ಹೇಳಿದರು

ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಹೊಸದರಲ್ಲಿ ನೀಡಿದ ಭರವಸೆಯಂತೆ 10 ಕೆಜಿ ಅಕ್ಕಿ ನೀಡಲು ಸಾಧ್ಯವಾಗಿರಲಿಲ್ಲ ಹಾಗಾಗಿ 5 ಕೆಜಿ 5ಕೆಜಿ ಹಣವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗಿತ್ತು ಈಗ ಅಕ್ಕಿ ಲಭ್ಯವಿರುವ ಕಾರಣ ಹಣದ ಬದಲು ಒಟ್ಟು



10ಕೆಜಿ ಅಕ್ಕಿಯನ್ನೆ ಬಿಪಿಎಲ್ ಕಾರ್ಡುದಾರರಿಗೆ ನೀಡುತ್ತೇವೆ ಎಂದು ಸಚಿವ ಮುನಿಯಪ್ಪ ಹೇಳಿದರು.

ಅನ್ನ ಭಾಗ್ಯ ಯೋಜನೆ ಆರಂಭದಲ್ಲಿ ಕೇಂದ್ರ ಸರ್ಕಾರದ 5 ಕೆಜಿ ಅಕ್ಕಿ ಜೊತೆ ರಾಜ್ಯ ಸರ್ಕಾರ 5 ಕೆಜಿ ಅಕ್ಕಿ ನೀಡುವುದಾಗಿ ಘೋಷಿಸಿತ್ತು. ಆದರೆ ಕೇಂದ್ರ ಸರ್ಕಾರದಿಂದ ಸರಿಯಾಗಿ ಸ್ಪಂದನೆ ಸಿಗದೇ ಇದ್ದಾಗ ರಾಜ್ಯ ಸರ್ಕಾರ ಅನ್ನಭಾಗ್ಯದ ಹಣ ನೀಡಲಾಗುವುದು ಎಂದು ತಿಳಿಸಿತ್ತು.

ಅದರಂತೆ ಸರ್ಕಾರ ಒಂದು ಕೆಜಿ ಅಕ್ಕಿಗೆ ಪುಟ 2

## ಶ್ವೇತಪತ್ರ ಹೊರಡಿಸಲು ಸಿಎಂಗೆ ವಿಜಯೇಂದ್ರ ಆಗ್ರಹ

**ಬೆಂಗಳೂರು:** ಮುಖ್ಯಮಂತ್ರಿಗಳು ಆಲ್ ಈಸ್ ವೆಲ್ ನಾಟಕ ಬದಿಗಿಡಬೇಕು. ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ಆಗ್ರಹಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ "ಜಗನ್ನಾಥ ಭವನ"ದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕ್ರೋಡೀಕೃತ ಹಣ ಉಪಯೋಗ ಆಗುತ್ತಿದೆಯೇ ದುರುಪಯೋಗ ಆಗುತ್ತಿದೆಯೇ? ಎಂದು ಪ್ರಶ್ನಿಸಿದರು. ಗ್ಯಾರಂಟಿಗಳ ಬಗ್ಗೆ ನಮ್ಮ ವಿರೋಧವಿಲ್ಲ; ಅದರ ಅನುಷ್ಠಾನ ಆಗಲೇಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ, ಪಂಗಡದ ಹಣವನ್ನು ಗ್ಯಾರಂಟಿಗೆ ಬಳಸಿದ್ದಾರೆ. ಇದರ ವಿರುದ್ಧ ಆ ಸಮಾಜದ ಮುಖಂಡರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನಮಗೆ ಅನ್ಯಾಯ ಮಾಡದಿರಿ ಎಂದು ತಾಕೀತು ಮಾಡಿ ಮನವಿಪುಟ 2







ಬೆಂಗಳೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದ ಏರ್ ಶೋ ಹಿನ್ನೆಲೆಯಲ್ಲಿ ಭಾರತೀಯ ವಾಯು ಸೇನೆಯ ಪ್ರಮುಖರು ಇಂದು ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಅಭಿನಂದಿಸಿದರು.

## ಯೋಜನೆಗಳು ಫಲಾನುಭವಿಗಳಿಗೆ ತಲುಪುತ್ತಿಲ್ಲ

**ನವದೆಹಲಿ:** ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಫಲಾನು ಭವಿಗಳಿಗೆ ತಲುಪುತ್ತಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದ್ದಾರೆ.



ಬುಧವಾರ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ತಲುಪುತ್ತಿಲ್ಲ. ಕಾಂಗ್ರೆಸ್‌ನವರು ವಾಪಸ್ ತಿರುಗಿ ನೋಡಬೇಕು. ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದಿದೆ. ಆದರೆ ಜನರಿಗೆ ಯೋಜನೆಗಳು ತಲುಪುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪುಟ 2

## ಜ್ಞಾನೇಶ್ ಕುಮಾರ್ ಅಧಿಕಾರ ಸ್ವೀಕಾರ

**ನವದೆಹಲಿ:** ಭಾರತದ ಕೇಂದ್ರ ಚುನಾವಣಾ ಆಯೋಗದ 26ನೇ ಮುಖ್ಯ ಚುನಾವಣಾ ಆಯುಕ್ತರಾಗಿ ಬುಧವಾರ ಜ್ಞಾನೇಶ್ ಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ.

ನವದೆಹಲಿಯಲ್ಲಿರುವ ಚುನಾವಣಾ ಆಯೋಗದ ಕಚೇರಿಗೆ ಆಗಮಿಸಿದ ಅವರು, ಅಧಿಕಾರ ವಹಿಸಿ ಕೊಂಡಿದ್ದು, ನಂತರ ಇತರೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ.

ಸಿಇಸಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮಾತನಾಡಿದ ಅವರು, ರಾಷ್ಟ್ರ ನಿರ್ಮಾಣದ ಮೊದಲ ಹೆಜ್ಜೆ ಮತದಾನವಾಗಿದ್ದು, 18 ವರ್ಷ ತುಂಬಿದ ಪ್ರತಿಯೊಬ್ಬ ಭಾರತದ ನಾಗರಿಕನೂ ಮತದಾನ ಮಾಡಬೇಕು. ಭಾರತದ ಸಂವಿಧಾನ, ಚುನಾವಣಾ ಕಾನೂನುಗಳು, ನಿಯಮಗಳು ಮತ್ತು ಸೂಚನೆಗಳ ಪ್ರಕಾರ, ಚುನಾವಣಾ ಆಯೋಗವು ಮತದಾರರೊಂದಿಗೆ ಇತ್ತು, ಇದೆ ಮತ್ತು ಯಾವಾಗಲೂ ಇರುತ್ತದೆ ಎಂದರು.

ಈ ವೇಳೆ ನಿವೃತ್ತಿ ಹೊಂದಿದ ಹಿಂದಿನ ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಸೇರಿದಂತೆ ಹಲವರು ಜ್ಞಾನೇಶ್‌ಕುಮಾರ್ ಪುಟ 2



### ಇಂದು ವಿಚಾರಣೆ

**ನವದೆಹಲಿ:** 2023ರ ಕಾನೂನಿನಡಿ ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರ ನೇಮಕ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಆದ್ಯತೆಯ ಮೇಲೆ ಬುಧವಾರ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್.ಕೋಟೀಶ್ವರ್ ಸಿಂಗ್ ಪುಟ 2

## ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ

**ಮೈಸೂರು:** ರಾಜ್ಯದಲ್ಲಿ ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ಧರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಮಾತನಾಡಿದ ಸಿಎಂ ಸಿದ್ದರಾಮಯ್ಯ ಪುತ್ರ ಡಾ. ಯತಿಂದ್ರ ಸಿದ್ದರಾಮಯ್ಯ, ಯಾರೂ ಕೂಡ ಸಿಎಂ ಬದಲಾವಣೆ ವಿಚಾರ ಮಾತನಾಡುತ್ತಿಲ್ಲ. ಆದರೆ ಮಾಧ್ಯಮಗಳಲ್ಲಿ ಮಾತ್ರ ಸಿಎಂ ಬದಲಾವಣೆ ವಿಚಾರ ಬರುತ್ತಿದೆ ಇಂತಹ ವಿಚಾರಗಳಿಗೆ ವಿರಾಮ ಹಾಕಬೇಕು ಪುಟ 2

## ಮಹಾಕುಂಭ ಮೇಳ: ಬದಲಾಣೆ ಇಲ್ಲ

**ಉತ್ತರ ಪ್ರದೇಶ:** ಕಾರ್ಯಕ್ರಮದ ವೇಳಾಪಟ್ಟಿಯನ್ನು ಧಾರ್ಮಿಕ ಮುಹೂರ್ತಗಳನ್ನು (ಶುಭ ಸಮಯಗಳು) ಆಧರಿಸಿ ನಿರ್ಧರಿಸಲಾಗುತ್ತದೆ ಹಾಗೂ ಅದರಲ್ಲಿ ಯಾವುದೇ ಬದಲಾಣೆ ಇಲ್ಲ" ಎಂದು ಪ್ರಯಾಗರಾಜ್ ಜಿಲ್ಲಾ ಮ್ಯಾಜಿಸ್ಟ್ರೇಟ್ (ಡಿಎಂ) ರವೀಂದ್ರ ಮಂದರ್ ಸ್ಪಷ್ಟಪಡಿಸಿದ್ದಾರೆ. ಜನವರಿ 13ರಂದು ಆರಂಭಗೊಂಡಿರುವ ಪುಟ 2

## ಹಿಂದಿ ಹೇರಿಕೆ: ಮಾತೃಭಾಷೆ ಮರೆಯಬೇಕಾಗುತ್ತೆ

**ಚೆನ್ನೈ:** ಕೇಂದ್ರದ ಹಿಂದಿ ಹೇರಿಕೆಗೆ ಒಪ್ಪಿಕೊಂಡರೆ ನಾವು ನಮ್ಮ ಮಾತೃಭಾಷೆಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಎಚ್ಚರಿಸಿದ್ದಾರೆ. ಕೇಂದ್ರದ ತ್ರಿಭಾಷಾ ನೀತಿ ಮತ್ತು ಹಿಂದಿ ಆಡಳಿತಾರೂಢ ಡಿಎಂಕೆ ಮತ್ತು ಪುಟ 2

## ಅಕ್ರಮ ನಡೆದಿಲ್ಲ: ತನಿಖೆಗೆ ಮುಕ್ತ

**ಬೆಂಗಳೂರು:** ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ತಮಗೆ ಸೇರಿದ ಜಮೀನನ್ನು ನಾನು 40 ವರ್ಷದ ಹಿಂದೆಯೇ ಖರೀದಿ ಮಾಡಿದ್ದೇನೆ. ಈ ಹಿಂದೆಯೇ ಹತ್ತಾರು ಬಾರಿ ಸರ್ವೆ, ತನಿಖೆ ಎಲ್ಲವೂ ನಡೆದಿದೆ. ಈಗ ಮತ್ತೆ ಸರ್ವೇ ಕಾರ್ಯ ನಡೆಸಿದ್ದಾರೆ. ತನಿಖೆ ಮಾಡುವುದಕ್ಕೆ ನಾನು ಮುಕ್ತವಾಗಿದ್ದೇನೆ. ಯಾವುದೇ ಅಕ್ರಮ ಆಗಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನನ್ನು ಟಾರ್ಗೆಟ್ ಮಾಡಿ ಸರ್ವೇ ಮಾಡಿಸುತ್ತಿದ್ದಾರೆ. ಇದರಲ್ಲಿ ಸಂಶಯವೇ ಬೇಡ. ಯಾವುದೇ ತನಿಖೆ



ಮಾಡಲಿ, ನಾನು ಮುಕ್ತವಾಗಿದ್ದೇನೆ. ನಾನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ತರ ಸರ್ಕಾರ ಜಮೀನು ಲೂಟಿ ಮಾಡಿಲ್ಲ ಎಂದು ಆಕ್ರೋಶ ಹೊರ ಹಾಕಿದರು.

ಕೇತಗಾನಹಳ್ಳಿಯ ತಮ್ಮ ಜಮೀನಿಗೆ ಸಂಬಂಧಿಸಿದಂತೆ ನಿನ್ನೆ ಕಾಂಗ್ರೆಸ್‌ನ ಕೆಲ ಪುಡಾರಿಗಳು ದೂರುದಾರನನ್ನು ಕರೆಸಿ ಮಾತನಾಡಿಸಿದ್ದಾರೆ. 40 ವರ್ಷ ಇಲ್ಲದ ದೂರುದಾರರು ಈಗ ಹೇಗೆ ಉದ್ಭವವಾದರು ಎಂದು ಪ್ರಶ್ನಿಸಿದ ಅವರು, ತನಿಖೆ ನಡೆಸಲಿ, ನನ್ನದೇನೂ ತಕರಾರಿಲ್ಲ. ಸರ್ವೆ ನಡೆಸುವಂತೆ ಡಿಸಿಯವರಿಗೂ ಹೇಳಿದ್ದೇನೆ ಎಂದರು.

40 ವರ್ಷಗಳಿಂದ ನನ್ನನ್ನು ಗುರಿಯಾಗಿಸಿ ಈ ರೀತಿಯ ತನಿಖೆಗಳನ್ನು ನಡೆಸುತ್ತಿದ್ದಾರೆ. 1986-87 ರಲ್ಲಿ ಮಾಜಿ ಶಾಸಕ ಸಿ.ಎಂ. ಲಿಂಗಪ್ಪ, ಜಿ.ಪಂ. ಮಾಜಿ ಸದಸ್ಯ ರಾಮಚಂದ್ರ ಎನ್ನುವವರು ಅಂದಿನ ಮುಖ್ಯಮಂತ್ರಿ, ಪ್ರಧಾನಿ, ಗೃಹ ಸಚಿವರಿಗೆ ದೂರು ನೀಡಿ ಕಾನೂನು ಬಾಹಿರ ಭೂಮಿ ಖರೀದಿ ಮಾಡಿದ್ದಾರೆ ಎಂದೆಲ್ಲಾ ಹೇಳಿದ್ದರು. ಪುಟ 2

## ನಂದಿನಿ ಹಾಲಿನ ದರ 5 ರೂ ಏರಿಕೆಗೆ ಪ್ರಸ್ತಾವನೆ

ಬೆಂಗಳೂರು: ಪ್ರತಿ ಲೀಟರ್ ಹಾಲಿಗೆ ಐದು ರೂ. ಹೆಚ್ಚಳ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆಎಂಎಫ್ ಪ್ರಸ್ತಾವನೆ ಸಲ್ಲಿಸಿದೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಗೆ ಕೆಎಂಎಫ್ ಮತ್ತೊಂದು ಶಾಕ್ ನೀಡಿದೆ. ಈಗಾಗಲೇ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ದರ ಹೆಚ್ಚಳ, ಬೆಂಗಳೂರು ಮೆಟ್ರೋ ಟಿಕೆಟ್ ದರ ಏರಿಕೆಯ ಬರೆ ಕಾಯುತ್ತಿರುವ ಸಂದರ್ಭದಲ್ಲೇ ಹಾಲಿನ ದರ ಏರಿಕೆ ಹೆಚ್ಚಳಕ್ಕೆ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳ ಹಾಲಿನ ದರ ಲೀಟರ್‌ಗೆ 5 ರೂಪಾಯಿ ಏರಿಸುವುದಕ್ಕೆ ಸಿದ್ಧತೆ ನಡೆಸಿದೆ. ಜೂನ್ 2024ರಲ್ಲಿ ಪ್ರತಿ ಪ್ಯಾಕೆಟ್‌ಗೆ 50 ಮಿಲಿ ಲೀ. ಹಾಲು ಹೆಚ್ಚುವರಿಯಾಗಿ ಕೊಟ್ಟು ಮತ್ತೆ 2 ರು.ಏರಿಕೆ ಮಾಡಲಾಗಿತ್ತು. ಇದೀಗ ರಾಜ್ಯದ 16 ಹಾಲು ಒಕ್ಕೂಟಗಳಿಂದ ಪುಟ 2

## ಈಗ ಮತದಾರರ ಬಗ್ಗೆ ಯಾಕೆ ಕೀಳು ಮಾತು..?

**ಬೆಂಗಳೂರು:** ಕಳೆದ ಮೂರ್ನಾಲ್ಕು ತಿಂಗಳಿನಿಂದ ಗೃಹಲಕ್ಷ್ಮೀ, ಅನ್ನಭಾಗ್ಯ ಹಣ ಜಮೆಯಾಗದ ಬಗ್ಗೆ ಪ್ರಶ್ನಿಸಿದ್ದಕ್ಕೆ ಗೃಹಲಕ್ಷ್ಮೀ, ಅನ್ನಭಾಗ್ಯ ಹಣವೇನು ತಿಂಗಳ ಸಂಬಳ ಅಲ್ವಲ್ಲಾ ಎಂದು ಹೇಳಿಕೆ ನೀಡಿದ್ದ ಇಂಧನ ಸಚಿವ ಕೆ.ಜೆ ಜಾಜ್ ಗೆ ವಿಪಕ್ಷ ನಾಯಕ ಆರ್. ಅಶೋಕ್ ತಿರುಗೇಟು ಕೊಟ್ಟಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಆರ್.ಅಶೋಕ್, ಸ್ವಾಮಿ ಸಚಿವ ಕೆ.ಜೆ ಜಾರ್ಜ್ ಅವರೇ, ಗೃಹಲಕ್ಷ್ಮಿ, ಅನ್ನಭಾಗ್ಯ ಹಣ ತಿಂಗಳ ಸಂಬಳ ಅಲ್ವಲ್ಲ ಅಂತ ಹೇಳಿದ್ದೀರಲ್ಲಾ, ಇದೇನಾ ಮತದಾರರಿಗೆ ನೀವು ಕೊಡುವ ಗೌರವ? ಗೃಹಲಕ್ಷ್ಮಿ ಹಣ ಕೊಡಿ, ಅನ್ನಭಾಗ್ಯದ ಹಣ ಕೊಡಿ ಅಂತ ಮಾತಾದರರೇನು ನಿಮ್ಮ ಬಳಿ ಭಿಕ್ಷೆ ಪುಟ 2



## ಇನ್ನೂ 15 ದಿನ ಮಲಪ್ರಭಾ ಜಲಾಶಯದಿಂದ ನೀರು ಬಿಡಲು ಆದೇಶ

ಸವದತ್ತಿ: ಮಲಪ್ರಭಾ ಜಲಾಶಯದಿಂದ ಕಾಲುವೆಗಳಿಗೆ ಹರಿಬಿಡಲಾಗಿರುವ ನೀರನ್ನು ಫೆ.15ರಿಂದ ಸ್ಥಗಿತಗೊಳಿಸುವ ನಿರ್ಧಾರವನ್ನು ರೈತರ ಬೇಡಿಕೆಯ ಹಿನ್ನೆಲೆಯಲ್ಲಿ ಕೈಬಿಟ್ಟು ಮಾ. 1ರವರೆಗೂ ನೀರು ಬಿಡುವಂತೆ ಮಲಪ್ರಭಾ ಯೋಜನಾ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಆದೇಶಿಸಿದ್ದಾರೆ.

ಲಕ್ಷ್ಮೀಹೆಬ್ಬಾಳ್ಕರ್ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 15ರಂದು ಜರುಗಿದ್ದ ಸಭೆಯಲ್ಲಿ ಶಾಸಕರುಗಳು, ಮಹಾಮಂಡಳದ ಅಧ್ಯಕ್ಷರು, ರೈತರು ಮುಖಂಡರೊಂದಿಗೆ ಚರ್ಚಿಸಿ, ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಪ್ರಸಕ್ತ 2024-25ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗಾಗಿ 14.87 ಟಿ.ಎಂ.ಸಿ ಹಾಗೂ ಹಿಂಗಾರು ಹಂಗಾಮಿಗೆ 16 ಟಿ.ಎಂ.ಸಿ ಹೀಗೆ ಒಟ್ಟಾರೆಯಾಗಿ 30.842 ಟಿ.ಎಂ.ಸಿ ನೀರನ್ನು ಮಲಪ್ರಭಾ ಜಲಾಶಯದಿಂದ ನೀರಾವರಿಗಾಗಿ



ಒದಗಿಸಲಾಗಿದೆ. ಅದರಂತೆ ಮಲಪ್ರಭಾ ಜಲಾಶಯದಿಂದ ನೀರಾವರಿಗಾಗಿ ಒಳಪಡುವ ಕಾಲುವೆಗಳ ಮುಖಾಂತರ ಫೆಬ್ರವರಿ 14ರ ವರೆಗೆ 16 ಟಿಎಂಸಿ ನೀರನ್ನು ನೀರಾವರಿ ಉದ್ದೇಶಕ್ಕೆ ರೈತರಿಗೆ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ ಎರಡೂ ಹಂಗಾಮುಗಳು ಮುಗಿದಿದ್ದರೂ ಸಹ, ನರಗುಂದ ಹಾಗೂ ಬಾದಾಮಿ ಶಾಸಕರು ಹಾಗೂ ರೈತ ಮುಖಂಡರು ನೀರನ್ನು ಕಾಲುವೆಗಳಿಗೆ ಮಾರ್ಚ 15ರವರೆಗೆ ಮಲಪ್ರಭಾ ಪುಟ 2

## ಭಯೋತ್ಪಾದನೆ ವಿರುದ್ಧ ಪಾಕ್ ಹೋರಾಡುತ್ತೆ ವ್ಯಂಗ್ಯದ ಪರಾಕಷ್ಟೆ

**ವಿಶ್ವಸಂಸ್ಥೆ:** ಭಾರತವು ಪಾಕ್ ಪ್ರಾಯೋಜಿತ ಜೈಷ್-ಎ-ಮೊಹಮ್ಮದ್ನಂತಹರ ಉಗ್ರಗಾಮಿ ಸಂಘಟನೆಗಳ ಭಯೋತ್ಪಾದಕ ಕೃತ್ಯಗಳ ಬಲಿಪಶುವಾಗಿದೆ ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಾರತದ ಪ್ರತಿನಿಧಿ ಪರ್ವತೇನಿ ಹರೀಶ್ ಹೇಳಿದ್ದಾರೆ.

ಚೀನಾದ ಅಧ್ಯಕ್ಷತೆಯಲ್ಲಿ ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಪಾಕಿಸ್ತಾನ ತಾನು ಭಯೋತ್ಪಾದನೆ ಪಿಡುಗಿನ ವಿರುದ್ಧ ಹೋರಾಟ ನಡೆಸುತ್ತಿರುವುದಾಗಿ ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತಿರುವುದು ವ್ಯಂಗ್ಯದ ಪರಾಕಷ್ಟೆ ಎಂದು ಟೀಕಿಸಿದ್ದಾರೆ. ಆಭಿವೈವಿಧ್ಯದ ಆಚರಣೆ, ಸುಧಾರಣೆ ಮತ್ತು ಜಾಗತಿಕ ಆಡಳಿತದ ಉತ್ತಮಿತೆಬಿ ವಿಚಾರ ಕುರಿತ ಸಭೆಯಲ್ಲಿ ಪಾಕಿಸ್ತಾನದ ಉಪಪ್ರಧಾನಿ, ಪ್ರಸ್ತಾಪಿಸಿದಸಕ್ಕೆ ಹರೀಶ್ ಈ ಮಾರುತ್ತರ ನೀಡಿದರು. ಪಾಕಿಸ್ತಾನವು ಭಯೋತ್ಪಾದನೆ ಮತ್ತು ಉಗ್ರವಾದದ ಜಾಗತಿಕ ಕೇಂದ್ರವಾಗಿದೆ. ತನ್ನ ನೆಲದಲ್ಲಿ ವಿಶ್ವಸಂಸ್ಥೆ ಪುಟ 2

## ಫೆ.25ರಂದು ಕೇಂದ್ರ ಜಲಶಕ್ತಿ ಸಚಿವರ ಭೇಟಿ

**ಉದಯಪುರ:** "ಕೇಂದ್ರ ಜಲಶಕ್ತಿ ಸಚಿವರು ಇದೇ ಫೆ. 25ರಂದು ಭೇಟಿಗೆ ಸಮಯಾವಕಾಶ ನೀಡಿದ್ದು, ರಾಜ್ಯದ ನೀರಾವರಿ ಯೋಜನೆಗಳ ಪ್ರಸ್ತಾವನೆ ಸಲ್ಲಿಸುತ್ತೇನೆ. ನಮ್ಮ ಯೋಜನೆಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡುವ ವಿಶ್ವಾಸವಿದೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಉದಯಪುರದಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯ ನಡೆಸುತ್ತಿರುವ ಅಖಿಲ ಭಾರತ ರಾಜ್ಯಗಳ ಜಲಸಂಪನ್ಮೂಲ ಸಚಿವರ ಸಮ್ಮೇಳನದಲ್ಲಿ ಶಿವಕುಮಾರ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

"ಕೇಂದ್ರ ಸಚಿವರನ್ನು ಭೇಟಿ ಮಾಡಿ, ಈ ಹಿಂದೆ ಘೋಷಿಸಲಾಗಿರುವ ಅನುದಾನ ಹಾಗೂ ಮಹದಾಯಿ, ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ಚರ್ಚೆ ಮಾಡಲಾಗುವುದು" ಎಂದು ತಿಳಿಸಿದರು.


"ಈ ಸಮ್ಮೇಳನ ಎಲ್ಲಾ ರಾಜ್ಯಗಳ ಸಚಿವರುಗಳನ್ನು ಒಗಗೂಡಿಸಿದೆ. ಎಲ್ಲಾ



ರಾಜ್ಯಗಳ ಅತ್ಯುತ್ತಮ ನೀರಾವರಿ ವ್ಯವಸ್ಥೆಗಳ ಪರಿಚಯವಾಗುತ್ತಿದೆ. ಇದರ ಜತೆಗೆ ನಮ್ಮಲ್ಲಿರುವ ಸಮಸ್ಯೆಗಳನ್ನು ಅರಿತು, ಅವುಗಳನ್ನು ಕೇಂದ್ರ ಜಲಶಕ್ತಿ ಸಚಿವಾಲಯದ ಮುಂದೆ ಇಡಬಹುದಾಗಿದೆ. ನೀರನ್ನು ಸಂರಕ್ಷಿಸಬೇಕು,

ಮರುಬಳಕೆ ಮಾಡಬೇಕು. ಎಂಬುದು ಈ ಸಮ್ಮೇಳನದ ಉದ್ದೇಶ. ನಮ್ಮ ಯೋಜನೆಗಳನ್ನು ರಾಜಕೀಯ ಉದ್ದೇಶದಿಂದ ನೋಡಬೇಡಿ, ಸಮಸ್ಯೆಗಳನ್ನು ಬಗೆಹರಿಸಬೇಕು. ರಾಜ್ಯಗಳ ನಡುವಣ ಬಿಕ್ಕಟ್ಟನ್ನು ಕೇಂದ್ರ ಸರ್ಕಾರ ಬಗೆಹರಿಸಬೇಕು" ಎಂದು ತಿಳಿಸಿದರು. ಪುಟ 2

# ರೈತನಾಯಕ ಪ್ರೊ.ಎಂ.ಡಿ ನಂಜುಂಡಸ್ವಾಮಿಯವರ ಪುಣ್ಯಸ್ಮರಣೆ



**ದೇವನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ವಿಶ್ವಚೇತನ ರೈತನಾಯಕ ಹಾಗೂ ರೈತ ಸಂಘದ ಸಂಸ್ಥಾಪಕ ಪ್ರೊ. ಎಂ.ಡಿ ನಂಜುಂಡಸ್ವಾಮಿಯವರ ಜಯಂತಿ ಹಾಗೂ 21 ನೇ ಪುಣ್ಯಸ್ಮರಣೆಯನ್ನು ದೇವನಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಎ.ಎನ್ ಮಂಜೇಗೌಡರ ಅಧ್ಯಕ್ಷತೆಯಲ್ಲಿ ಮಂಗಳವಾರ ಆಚರಿಸಲಾಯಿತು.

ನಂಜುಂಡಸ್ವಾಮಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ರಾಜ್ಯ ಯುವ ಘಟಕದ ಅಧ್ಯಕ್ಷ ಡಾ. ಬಿ.ಕೆ. ವಿನೋದ ಕುಮಾರಗೌಡ ಮಾತನಾಡಿ, ವಿಶ್ವಚೇತನ ರೈತ ನಾಯಕ ಪ್ರೊ. ನಂಜುಂಡಸ್ವಾಮಿಯವರು ರೈತರ ಸಂಕಷ್ಟಗಳನ್ನು ನಿವಾರಣೆ ಮಾಡುವ ಸಲುವಾಗಿ ನಾಡಿನಾದ್ಯಂತ ಹಗಲಿರುಳು ಸಂಚರಿಸಿ ಕಟ್ಟಿ ಬೆಳೆಸಿದ ರೈತ ಸಂಘ ಇಂದು ತನ್ನ ಮೂಲಧ್ಯೇಯ ಮರೆತು ಹಲವು ಕವಲುಗಳಾಗಿಗುಂಪುಗಳಗಿ ಒಡೆದು ಪ್ರತಿಷ್ಠೆಯ ಸಂಘಗಳಾಗಿವೆ ರೈತಸಂಘಂದ ಬಣಗಳು ಎಷ್ಟೇ ಇರಲಿ ಗುರಿ ಹೋರಾಟ ಒಂದೇ ಇದ್ದು ಒಬ್ಬರ ಕಾಲನ್ನು ಒಬ್ಬರು ಎಳೆಯದೇ ಹೋದರೆ ಮಾತ್ರ ನಂಜುಂಡಸ್ವಾಮಿಯವರ ಆಶಯಗಳನ್ನು ಈಡೇರಿಸಲು ಸಾಧ್ಯ ಹಾಗೂ ಇಂದು ಹೋರಾಟಗಳ ದಿಕ್ಕು ಎತ್ತ ಸಾಗುತ್ತಿದೆ ಎಂಬ ಪ್ರಶ್ನೆಯಾಗಿದೆ ಒಂದು ಪಕ್ಷ ಒಬ್ಬಿಬ್ಬ ರಾಜಕೀಯ ನೇತರಾರನ್ನು ಓಲೈಸಲು ರೈತರ ಆಶಯಗಳನ್ನು ಬಲಿ ಕೊಡಬಾರದು ಯಾರನ್ನೂ ಗೌರವಿಸಿ ಅವರಿಗೆ , ಮಣೆ ಹಾಕುವ ಬದಲು ನಿಜವಾದ ಹೋರಾಟಗಾರರು ನಿಜವಾದ ರೈತರು ಒಂದಾಗಿ ನಡೆದಾಗ ಮಾತ್ರ ರೈತ ಹೋರಾಟ ಯಶಸ್ಸು ಕಾನಲಿದೆ ಗುಂಪುಗಾರಿಕೆ ಓಲೈಕೆ ಬಿಡದ ಹೊರತು ಏನು ಸಾಧಿಸಲಾಗದು ಎಂದರು.

ರಾಜ್ಯ ಕಾರ್ಯಾಧ್ಯಕ್ಷ ಎನ್.ಚಂದ್ರಶೇಖರ್, ಬಯಲು ಸೀಮೆ ಪ್ರದೇಶ ಎಲ್ಲಿದೆಯೋ ಅಂತಹ ಕಡೆ ಅದರಲ್ಲೂ ನಮ್ಮ ಗ್ರಾಮಾಂತರ ಜಿಲ್ಲೆಯಲ್ಲಿ ಸರ್ಕಾರ ಕೆಐಎಡಿಬಿ ಹೆಸರಲ್ಲಿ ರೈತರ ಜಮೀನನ್ನು ಒಂದು ಪಟ್ಟು ಮೊತ್ತಕ್ಕೆ ಖರೀದಿಸಿ ಅದನ್ನು ಹತ್ತು ಪಟ್ಟು ಲಾಭಕ್ಕೆ ಕಾರ್ಪೊರೇಟ್ ಕಂಪನಿಗಳಿಗೆ ಮಾರಾಟಮಾಡುವ ಭೂ ಮಾಫೀಯ ವ್ಯವಹಾರ ಸರ್ಕಾರ ಮಾಡುತ್ತಿದೆ ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟ ಗೆದ್ದರೆ ನಾವು ಇಡಿ ರಾಜ್ಯದಲ್ಲಿ ರೈತ ಹೋರಾಟಗಳನ್ನು ಗೆದ್ದಂತೆ ನಾವು ಏನು ಮಾಡಬೇಕಾದರೂ ಸಂಘಟನೆ ಮುಖ್ಯ ಸಂಘಟನೆಯನ್ನು ಗಟ್ಟಿಗೊಳಿಸಿ ನಾವು ಒಗ್ಗಟ್ಟಾಗದ ಹೊರತು ನಮ್ಮ ಹೋರಾಟಗಳಿಗೆ ಚಳುವಳಿಗಳಿಗೆ ಜಯಸಿಗುವುದಿಲ್ಲ ನಂಜುಂಡಸ್ವಾಮಿಯವರ ಹೋರಾಟ ಶುದ್ದವಾದ ಹೋರಾಟ ಬಹಳ ಸೋಕ್ಷ ಹೋರಾಟಗಳಾಗಿತ್ತು ಹಾಗಾಗಿ ನಾವು ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಧ್ಯೇಯ ವಾಕ್ಯದಂತೆ ಸಂಘಟಿಸೋಣ ರೈತರೇ ದೇಶದ ಆಸ್ತಿ ಸರ್ಕಾರದ ಅಳಿವು ಉಳಿವು ನಮ್ಮ ಕೈಯಲ್ಲಿರುತ್ತದೆ ಎಂದರು.

ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ ಮಾತನಾಡಿ ನಂಜುಂಡಸ್ವಾಮಿಸ್ವಾಮಿಯವರ ಗರಡಿಯಲ್ಲಿ ಹಲವು ವರ್ಷ ಪಳಗಿದವರುನಾವು 80 ರ ದಶಕದಲ್ಲಿ ಅವರು ವಿದೇಶದಲ್ಲಿ ಉದ್ಯೋಗದಲ್ಲಿದ್ದರೂ ಅದನ್ನು ತೊರೆದು ಬಂದು ನಾಡಿನ ನೊಂದ ರೈತರ ಧ್ವನಿಯಾಗಿ ರೈತರನ್ನು ಒಗ್ಗೂಡಿಸಿ ರೈತ ಸಂಘ ಕಟ್ಟಿ ಅದನ್ನು ಯಾರೂ ಅಲುಗಾಡಿಸದಷ್ಟು ಗಟ್ಟಿಗೊಳಿಸಿ ನಮಗೆಲ್ಲಾ ಚಳುವಳಿಯ ಶಕ್ತಿ ಕೊಟ್ಟು ನಮ್ಮನ್ನು ಬಿಟ್ಟು ಹೋದರು ಅವರು ಹುಟ್ಟಿದ್ದು ಸತ್ತಿದ್ದು ಎರಡೂ ಒಮಧೇ ದಿನಾಂಕಗಳಾಗಿರುವುದರಿಂದ ನಾವು ಇದೆ ಮಾಸದಲ್ಲಿ ಅವರ ಸ್ಮರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅವರ ಹೊರಾಟದ ಹಾದಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದೆವೆ ಸಾಲಕ್ಕೆ ಹೆದರಿ ಯಾವ ರೈತರು ಆತ್ಮಹತ್ಯೆ ಮಾಡಿಕೊಳ್ಳಬಾರದು ನಾವು ಸಾಲಗಾರರಲ್ಲ ಬದಲಿಗೆ ಸರ್ಕಾರವೇ ನಮಗೆ ಸಾಲಗಾರ ಎಂಬ ಧ್ಯೇಯವಾಕ್ಯ ಬಿಟ್ಟು ಹೋದವರು ಎಂದು ಅವರೊಂದಿಗಿನ ಹೋರಾಟ ಒಡನಾಟದ ಕ್ಷಣಗಳನ್ನು ಮೆಲುಕು ಹಾಕಿದರು. ಚಳುವಳಿ ಇಲ್ಲವೆಂದರೆ ರೈತ ರೈತರ ಮಕ್ಕಳು ಬದುಕಲು ಸಾದ್ಯವಿಲ್ಲ ಶಾಸಕರು ಸಚಿವರು ಯಾರನ್ನು ಕೇಳದೆ ತಮ್ಮ ಸಂಬಳ ಹೆಚ್ಚಳ ಮಾಡಿಕೊಳ್ಳುತ್ತಾರೆ ನಮ್ಮ ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಇವರಿಂದ ಆಗಿಲ್ಲ ಎಂದರು. ಸಂಘಟನೆ ಗಟ್ಟಿಗೊಳಿಸಿ ನಂಜುಂಡಸ್ವಾಮಿಯವರ ಆಶಯಗಳನ್ನು ಉಳಿಸಿ ರೈತ ಮತ್ತು ರೈತರ ಭೂಮಿ ಉಳಿಸಿ ಎಂದರು.

ಇದೇ ವೇಳೆ ಬೈಚಾಪುರದ ನಟರಾಜ್, ಶೆಟ್ಟಿಗೆರೆ ಗ್ರಾಮದ ಸೌಭಾಗ್ಯಮ್ಮ, ವೆಂಕಟಮ್ಮ. ಲಕ್ಷ್ಮಮ್ಮ, ರತ್ನಮ್ಮ, ಸಂಘಟನೆಗೆ ಸೇರ್ಪಡೆಗೊಂಡರು ಮತ್ತು ಸೌಭಾಗ್ಯಮ್ಮನವರನ್ನು ಜಾಲ ಹೊಬಳಿ ಮಹಿಳಾ ಅಧ್ಯಕ್ಷೆಯನ್ನಾಗಿ ನೇಮಕ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಕೃಷ್ಣ, ರಾಜ್ಯ ಸಂಚಾಲಕ ಸೊಮಣ್ಣ, ಲೋಕೇಶಶರ್ಮ, ಚಿಕ್ಕಬಳ್ಳಾಪುರ ಜಿಲ್ಲಾ ಅಧ್ಯಕ್ಷ ಪ್ರಕಾಶ್, ಜಾಲ ಹೊಬಳಿ ಅಧ್ಯಕ್ಷ ಶೆಟ್ಟಿಗೆರೆ ರವಿ ಕಾನೂನು ಸಲಹೆಗಾರ ವೀರೇಂದ್ರ, ತಾಲೂಕು ಅಧ್ಯಕ್ಷ ಜಯಶಂಕರ್ ತಾಲೂಕು ಪ್ರಧಾನಾಕಾರ್ಯದರ್ಶಿ ಗಯಾಜ್‌ಪಾಷ, ಗೌರವಾಧ್ಯಕ್ಷ ಆರ್. ಮುನಿಶಾಮಪ್ಪ ಮತ್ತಿತರರು ಇದ್ದರು.

# ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಚೆಕ್



**ಆನೇಕಲ್:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಡಾ.ವೀರೇಂದ್ರ ಹೆಗ್ಗಡೆ ರವರ ಮಾರ್ಗದರ್ಶನದಲ್ಲಿ ಹಲವಾರು ಸಾಮಾಜಿಕ ಚಟುವಟಿಕೆಗಳನ್ನು ಮಾಡಲಾಗುತ್ತಿದ್ದು ಅದರಂತೆ ಆನೇಕಲ್ ತಾಲ್ಲೂಕಿನಲ್ಲಿ ಸಂಸ್ಥೆವತಿಯಿಂದ ವಿವಿಧ ಚಟುವಟಿಕೆಗಳಿಗೆ ಸುಮಾರು 12ಕೋಟಿಗೂ ಹೆಚ್ಚು ಮೊತ್ತವನ್ನು ನೀಡಲಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿರ್ದೇಶಕರು ಉಮಾರ್ ಅಬ್ಬಾ ತಿಳಿಸಿದ್ದಾರೆ. ಅವರು ಮಂಗಳವಾರ ಸರ್ಜಾಪುರ ಸಮೀಪದ ತಿಗಳ ಚೌಡದೇನಹಳ್ಳಿ ಗ್ರಾಮದ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಸುಮಾರು 1,50,000 ರೂಪಾಯಿ ಮೊತ್ತದ ಡಿ.ಡಿಯನ್ನು ವಿತರಿಸಿ ಮಾತನಾಡಿದರು

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ವತಿಯಿಂದ ರಾಜ್ಯದ ಉದ್ದಗಲಕ್ಕೂ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಹಾಲಿನ ಡೈರಿ ಕಟ್ಟಡ ರಚನೆಗೆ ಅನುದಾನ, ದೇವಸ್ಥಾನ ಜೀರ್ಣೋದ್ಧಾರಕ್ಕೆ ಅನುದಾನ, ಸಮುದಾಯ ಭವನ ನಿರ್ಮಾಣಕ್ಕಾಗಿ ಅನುದಾನ, ಶಾಲಾ ಕಟ್ಟಡ ರಚನೆಗೆ ಅನುದಾನ, ಜ್ಞಾನದೀಪ ಶಿಕ್ಷಕರ ಒದಗಣೆ, ಸುಜ್ಞಾನನಿಧಿ ಶಿಷ್ಯ ವೇತನ ವಿತರಣೆ, ಮಾಸಶಣ, ಕೆರೆಗಳ ಅಭಿವೃದ್ಧಿ ಸೇರಿದಂತೆ ವಿವಿಧ ಕಾರ್ಯಕ್ರಮದಡಿಯಲ್ಲಿ ಸಮಾಜಮುಖಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂದರು.

ಶ್ರೀ ಧರ್ಮರಾಯ ಸ್ವಾಮಿ ದೇವಾಲಯದ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಎಂ.ಸುಬ್ರಮಣಿ ಮಾತನಾಡಿ, ಧರ್ಮಸ್ಥಳ ಯೋಜನೆಯ ಮೂಖೇನ ಪುರಾತನ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳಿಗೆ ಬಲವನ್ನು ತುಂಬಿದಂತಾಗಿದೆ. ಹಾಗೂ ಗ್ರಾಮೀಣ ಭಾಗದ ಮಹಿಳೆಯರನ್ನು ಸಬಲೀಖರಣಗೊಳಿಸಲು ಸಂಘದ ವತಿಯಿಂದ ಆರ್ಥಿಕ ನೆರವನ್ನು ನೀಡಿ ರಾಜ್ಯಾದ ಆನೇಕ ಭಾಗಗಳಲ್ಲಿ ವಿವಿಧ ಚಟುವಟಿಕೆಗಳಿಗೆ ಅನುದಾನ ಒದಗಿಸುವ ಮೂಲಕ ಗ್ರಾಮಗಳ ಕಲ್ಯಾಣಕ್ಕಾಗಿ ಸಂಘವು ಮತ್ತು ಡಾ.ವೀರೇಂದ್ರ ಹೆಗ್ಗಡೆ ರವರು ಶ್ರಮಿಸುತ್ತಿರುವುದು ಸಂತಸವನ್ನುಂಟು ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕಿನ ಯೋಜನಾಧಿಕಾರಿಗಳಾದ ನಾಗೇಶ್, ದೊಮ್ಮಸಂದ್ರ ವಲಯದ ಮೇಲ್ವಿಚಾರಕರಾದ ಶಿವಶಂಕರ್, ಒಕ್ಕೂಟದ ಕಾರ್ಯದರ್ಶಿ ಇಟ್ಟಂಗೂರು ಪಾರ್ವತಿ, ಶ್ರೀ ಧರ್ಮರಾಯ ಸ್ವಾಮಿ ದೇವಾಲಯದ ಸಮಿತಿ ಟ್ರಸ್ಟ್ ನ ಅಧ್ಯಕ್ಷ ಸುಬ್ರಮಣಿ ಎಂ, ಖಜಾಂಚಿ ಮುರಗೇಶ್, ಯಮರೆ ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರಾಜು, ರಾಜೇಶ್ವರಿ, ದೇವಸ್ಥಾನ ಸ್ಥಳ ದಾನಿಗಳಾದ ಚಿನ್ನಸ್ವಾಮಿ ರೆಡ್ಡಿ, ಮುಖಂಡರಾದ ಶ್ರೀನಿವಾಸ್ ರೆಡ್ಡಿ ,ಗಿರೀಶ್, ಸುನೀಲ್,ಗೋಪಾಲ್, ನಾಗರಾಜು, ರಾಧಮ್ಮ ಹಾಗೂ ಮತ್ತಿತ್ತರರು ಹಾಜರಿದ್ದರು.

# ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ಗಳಿಕೆ ಬಹುಮುಖ್ಯ



**ಶಿಡ್ಲಘಟ್ಟ:** ರಾಷ್ಟ್ರಮಟ್ಟದಲ್ಲಿ ನಡೆದ ಬೇರೆ–ಬೇರೆ ಸಮೀಕ್ಷೆಗಳು ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನದಲ್ಲಿನ ಕೊರತೆಯ ಬಗ್ಗೆ ಮಾಹಿತಿಯನ್ನು ನೀಡುತ್ತಲೇ ಬಂದಿವೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ಗಳಿಕೆಯು ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಬಹುಮುಖ್ಯ ಘಟ್ಟ ಎಂದು ತಾಲ್ಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆಂಜನೇಯ ತಿಳಿಸಿದರು.

ತಾಲ್ಲೂಕಿನ ಹೊಸಪೇಟೆ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಎಫ್.ಎಲ್.ಎನ್ ಕಲಿಕಾ ಹಬ್ಬ, ವಿಜ್ಞಾನ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೇಶ ಮತ್ತು ರಾಜ್ಯದಲ್ಲಿ ಮಕ್ಕಳ ಹಂತದಲ್ಲಿ ಕಲಿಕಾ ಕೊರತೆ ಮತ್ತು ದೋಷಗಳ ಸವಾಲನ್ನು ನಿರ್ವಹಿಸಲು ಅನೇಕ ರೀತಿಯಲ್ಲಿ ಶೈಕ್ಷಣಿಕ ಪ್ರಯತ್ನಗಳು ನಡೆದಿವೆ ಆದಾಗಿಯೂ ಇನ್ನೂ ಈ ನಿಟ್ಟನಲ್ಲಿ ಸಾಧಿಸಬೇಕಾದುದು ಸಾಕಷ್ಟು ಇದೆ ಎಂದರು. ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಕಾರ್ಯದರ್ಶಿ ಎಚ್.ಎಸ್. ರುದ್ರೇಶಮೂರ್ತಿ ಮಾತನಾಡಿ, ಮಕ್ಕಳನ್ನು ಕಲಿಕಾ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿ ಸಂತೋಷದಾಯಕ ಕಲಿಕೆಗೆ ಹೆಚ್ಚೆಚ್ಚು ಅವಕಾಶಗಳನ್ನು ಒದಗಿಸಬೇಕು ಎಂದು ಹೇಳಿದರು.

2024–25ನೇ ಶೈಕ್ಷಣಿಕ ವರ್ಷವನ್ನು ಇಲಾಖೆಯು 'ಶೈಕ್ಷಣಿಕ ಬಲವರ್ಧನೆ ವರ್ಷ' ಎಂದು ಘೋಷಣೆ ಮಾಡಿದ್ದು ಸದರಿ ವರ್ಷದ ಶೈಕ್ಷಣಿಕ ಚಟುವಟಿಕೆಗಳೆಲ್ಲವೂ ಈ ಹಿನ್ನೆಲೆಯಲ್ಲಿ ನಡೆಯಲಿವೆ,ಮುಖ್ಯವಾಗಿ ಈ ಮೂಲಕ ಎಫ್.ಎಲ್.ಎನ್ ಸಾಧನೆಗಾಗಿ ಹಲವಾರು ಕಾರ್ಯಕ್ರಮಗಳನ್ನು, ವಿವಿಧ ಕ್ರಿಯಾಯೋಜನೆಗಳನ್ನು ರೂಪಿಸಿದ್ದು ಕಲಿಕಾ ಹಬ್ಬವೂ ಒಂದಾಗಿದೆ ಎಂದರು.

ಸಿ.ಆರ್.ಪಿ. ಎಂ.ರಮೇಶ್ ಕುಮಾರ್ ಮಾತನಾಡಿ, ಎಫ್.ಎಲ್.ಎನ್ ಅಭಿಯಾನವು ಮಕ್ಕಳಲ್ಲಿ ಬುನಾದಿ ಸಾಮರ್ಥ್ಯ ಗಳಿಕೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಒಂದು ಮಹತ್ತರ ಹೆಜ್ಜೆಯಾಗಿದೆ ಈ ಮೂಲಕ ಎಲ್ಲಾ ಮಕ್ಕಳು ಶೇ.100% ರಷ್ಟು ಬುನಾದಿ ಸಾಮರ್ಥ್ಯಗಳನ್ನು ಸಾಧಿಸಿ, ತರಗತಿ ಹಂತದ ಕಲಿಕೆಯನ್ನು ಸಾಧಿಸಲು ಅಣಿಯಾಗಬೇಕೆಂಬ ಗುರಿಯನ್ನು ಹೊಂದಲಾಗಿದೆ. ಶಿಕ್ಷಕರು ತಮ್ಮ ತರಗತಿ ಹಂತದಲ್ಲಿ ಬುನಾದಿ ಸಾಮರ್ಥ್ಯಗಳ ಸುಧಾರಣೆಗೆ ತಮ್ಮದೇ ಮಟ್ಟದಲ್ಲಿ ಪ್ರಯತ್ನವನ್ನು ಮಾಡುತ್ತಿದ್ದಾರೆ ಈ ಅಭಿಯಾನವು ಶಿಕ್ಷಕರ ಅಂತಹ ಪ್ರಯತ್ನಕ್ಕೆ ಮತ್ತಷ್ಟು ಬಲ ತುಂಬುತ್ತದೆ ಎಂದು ನುಡಿದರು.

ಮುಖ್ಯ ಶಿಕ್ಷಕಿ ಜಿ.ಎನ್.ನೇತ್ರಾವತಿ ಮಾತನಾಡಿ, ಬುನಾದಿ ಸಾಮರ್ಥ್ಯ ಗಳಿಕೆಗಾಗಿ ತರಗತಿ ಪ್ರಕ್ರಿಯೆಯನ್ನು ಅನುಕೂಲಿಸಲು ಕಲಿಕಾ ಹಬ್ಬದಂತಹ ಚಟುವಟಿಕೆಗಳು ಶಿಕ್ಷಕರಿಗೆ ನೆರವಾಗಲಿವೆ,ಶಿಕ್ಷಕರು ಭಾಷೆ ಮತ್ತು ಗಣಿತ ತರಗತಿಗಳನ್ನು ನಿರ್ವಹಿಸುವಾಗ ಚಟುವಟಿಕೆಗಳನ್ನು ತಮ್ಮ ನಿರಂತರ ತರಗತಿ ಪ್ರಕ್ರಿಯೆಯ ಭಾಗವಾಗಿಯೇ ಬಳಸಿಕೊಂಡು, ಮಕ್ಕಳ ಸಾಮರ್ಥ್ಯ ವರ್ಧನೆಗೆ ಪ್ರಯತ್ನಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಎಸ್.ಡಿ.ಎಂ.ಸಿ.ಅಧ್ಯಕ್ಷ ಎಚ್.ಸಿ. ಆಂಜಿನಪ್ಪ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ವಿದ್ಯಾರ್ಥಿಗಳಿಗಾಗಿ ಗಟ್ಟಿ ಓದು, ಶುದ್ಧ ಬರಹ, ಸರಳ ಗಣಿತ, ಕತೆ, ಜ್ಞಾಪಕ ಸ್ಪರ್ಧೆಗಳನ್ನು ನಡೆಸಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಶಿಕ್ಷಕಿ ಎನ್.ಶೈಲಜಾ ಮಾರ್ಗದರ್ಶನದಲ್ಲಿ ಮಕ್ಕಳೇ ತಯಾರಿಸಿದ ವಿಜ್ಞಾನ ಪ್ರಯೋಗ, ಮಾದರಿಗಳ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷೆ ದ್ಯಾವಮ್ಮಕೆಂಪಣ್ಣ , ಮುಖ್ಯ ಶಿಕ್ಷಕಿ ಪಿ.ಗೀತಾ, ವಿಜಯಕುಮಾರ್,ವಿವಿಧ ಶಾಲೆಗಳ ಶಿಕ್ಷಕರು, ವಿಧ್ಯಾರ್ಥಿಗಳು ಭಾಗವಹಿಸಿದ್ದರು.

# ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ




**ದೇವನಹಳ್ಳಿ:** ತಾಲೂಕಿನ ಯಲಿಯೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ಹಾಗೂ ಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮುತ್ತಪ್ಪ. ಕೆ, ಉಪಾಧ್ಯಕ್ಷರಾಗಿ ಭಾಗ್ಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಚೇತನ.ಆರ್ ಘೋಷಿಸಿದರು.

ನೂತನ ಅಧ್ಯಕ್ಷ ಕೆ.ಮುತ್ತಪ್ಪ ಮಾತನಾಡಿ ಎಲ್ಲಾ ನಿರ್ದೇಶಕರು ಹಾಗೂ ಮುಖಂಡರು ನನ್ನ ಮೇಲೆ ವಿಶ್ವಾಸವಿಟ್ಟು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎಲ್ಲರ ಸಲಹೆ ಮಾರ್ಗದರ್ಶನ ಪಡೆದು ಸಂಘವನ್ನು ಅಭಿವೃದ್ಧಿ ಪತದತ್ತ ಕೊಂಡೊಯ್ಯುತ್ತೇನೆ. ಸಂಘದಿಂದ ದೊರೆಯುವ ಎಲ್ಲಾ ಸವಲತ್ತುಗಳನ್ನು ರೈತರಿಗೆ ಪ್ರಾಮಾಣೀಕವಾಗಿ ದೊರೆಕಿಸಿಕೊಡುವ ಕೆಲಸ ಮಾಡುತ್ತೇನೆ ಎಂದರು.

ಯಲಿಯೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಉಪಾಧ್ಯಕ್ಷೆ ಭಾಗ್ಯಮ್ಮ ಮಾತನಾಡಿ ಹಳ್ಳಿಗಳಲ್ಲಿ ಹೆಚ್ಚಾಗಿ ಮಹಿಳಾ ಸಂಘಗಳಿದ್ದು ಮಹಿಳೆಯರಿಗೆ ಸ್ವಾವಲಂಬಿ ಬದುಕುಕಟ್ಟಿಕೊಳ್ಳಲು ಸಂಘದಿಂದ ದೊರಕಿಸಿಕೊಡಲಾಗುವುದು ಎಂದರು.

ಯಲಿಯೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ನಿದೇಶಕ ನಾರಾಯಣಸ್ವಾಮಿ ಮಾತನಾಡಿ ತಾಲೂಕಿನಲ್ಲೇ ಅತ್ಯುತ್ತಮ ಸಂಘವನ್ನಾಗಿ ಮಾಡುವ ಗುರಿ ಹೊಂದಿದ್ದೇವೆ. ಎಲ್ಲಾ ನಿರ್ದೇಶಕರು ನೂತನ ಅಧ್ಯಕ್ಷರಿಗೆ ಸಂಪೂರ್ಣ ಸಹಕಾರಿ ನೀಡಲಾಗುವುದು ಎಂದರು.

ಇದೆ ವೇಳೆ ಮುನೇಗೌಡ .ಎಚ್ ಆಂಜಿನಪ್ಪ. ಎನ್ .ಎಂ ಶ್ರೀನಿವಾಸ್ ಗೌಡ .ಡಿ ಪ್ರಭಾಕರ್. ವೈ.ಎಂ, ಲಕ್ಷ್ಮಮ್ಮ .ಎನ್ ಚಂದ್ರಶೇಖರ್. ಆರ್ ಮುನಿತಿಮ್ಮರಾಯಪ್ಪ ತಿಮ್ಮರಾಯಪ್ಪ ಮಂಜೇಶ್. ವೈ.ಎ ಆನಂದ್ ಗೌಡ .ಎಚ್, ಗ್ರಾಪಂ ಅಧ್ಯಕ್ಷರಾದ ಆಂಜಿನಮ್ಮ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹನುಮಪ್ಪ, ತ್ಯಾಗರಾಜು, ಮುನಿರಾಜು, ರೂಪಾಚಿಕ್ಕಣ್ಣ ನೇತ್ರಾವತಿ ಮಂಜುನಾಥ್ ಸೋಮಶೇಖರ್ ಮಟ್ಟಬಾರ್ಲು ಪ್ರಕಾಶ್, ಮೂರ್ತಿ, ಮುನಿದೊಡ್ಡಪ್ಪ, ಆರ್. ಆಂಜಿನಪ್ಪ, ಪ್ರಭಾಕರ್, ಯಲಿಯೂರು ಚಿಕ್ಕಣ್ಣ, ಮಂಜುನಾಥ್, ನಾರಾಯಣಸ್ವಾಮಿ ಸೀನಣ್ಣ, ರಾಘವೇಂದ್ರ, ಶಿವಾನಂದ ,ಗೌರಮ್ಮ ಸೇರಿದಂತೆ ತಾಲೂಕಿನ ಮುಖಂಡರು ,ಸದಸ್ಯರು ಮತ್ತು ಗ್ರಾಮಸ್ಥರು ಇದ್ದರು.

# ಸಮರ್ಪಕ ವಿದ್ಯುತ್ ಪೂರೈಸಬೇಕೆಂದು ಆಗ್ರಹಿಸಿ ರೈತರ ಪ್ರತಿಭಟನೆ



**ಹನೂರು:** ಸರಿಯಾಗಿ ನಿಗಧಿತ ಸಮಯಕ್ಕೆ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ಇದರಿಂದಾಗಿ ರೈತರು ಜಮೀನುಗಳಲ್ಲಿ ಬೆಳೆದ ಬೆಳೆಗಳಿಗೆ ನೀರಿಲ್ಲದೆ ಬೆಳೆದಂತಹ ಬೆಳೆಗಳು ಒಣಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ರೈತರು ಪ್ರತಿಭಟನೆ ನಡೆಸಿದರು.

ಹನೂರು ಪಟ್ಟಣದ ಚೆಸ್ಕಾಂ ಕಚೇರಿಯ ಮುಂದೆ ಜಮಾಯಿಸಿದ ಕರ್ನಾಟಕ ರಾಜ್ಯ ರೈತ ಸಂಘಟನೆ ಹಸಿರು ಸೇನೆ ಸಂಘಟನೆ ರೈತರು ಮುಖಂಡರು ಚೆಸ್ಕಾಂ ಇಲಾಖೆಯ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಬೇಕೆಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘಟನೆ ಹಾಗೂ ಹಸಿರು ಸೇನೆ ಸಂಘಟನೆ ರೈತರು ಹನೂರು ಪಟ್ಟಣದ ಟಿ.ಕೆ.ಎನ್ ಪೆಟ್ರೋಲ್ ಬಂಕಿನಿಂದ ಬೈಕ್ ರ್ಯಾಲಿ ಮೂಲಕ ಹೊರಟ ರೈತ ಪ್ರತಿಭಟನಾ ಮೆರವಣಿಗೆ ದಿವಂಗತ ಎಚ್.ನಾಗಪ್ಪ ವೃತ್ತ ಖಾಸಗಿ ಬಸ್ ನಿಲ್ದಾಣ ಹತ್ತಿರ ಮಾನವ ಸರಪಳಿ ನಿರ್ಮಿಸಿ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು. ನಂತರ ಅಲ್ಲಿಂದ ಚೆಸ್ಕಾಂ ಕಚೇರಿಯ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದರು.

ವಿದ್ಯುತ್ ನೀಡುತ್ತಿಲ್ಲ ರೈತರು ಬೆಳೆದಂತಹ ಬೆಳೆಗಳಿಗೆ ವಿದ್ಯುತ್ ಸರಿಯಾಗಿ ಕೊಡುತ್ತಿಲ್ಲದ ಕಾರಣ ನಮ್ಮ ಬೆಳೆಗಳು ಒಣಗುತ್ತಿದೆ. ದಿನನಿತ್ಯ ಏಳು ಗಂಟೆಗಳ ಕಾಲ ವಿದ್ಯುತ್ ನೀಡುತ್ತಿಲ್ಲ. ಚೆಸ್ಕಾಂ ಇಲಾಖೆ ಅಧಿಕಾರಿ ಸಿಬ್ಬಂದಿಗಳು ರಾತ್ರಿ ಸಮಯದಲ್ಲಿ ನಮ್ಮ ಜಮೀನುಗಳಿಗೆ ಬಂದು ನೀರು ಓಡಿಸುವ ಸ್ಟಾರ್ಟರ್ ಕಳೆದುಕೊಂಡು ಹೋಗಿದ್ದಾರೆಂದು ಆರೋಪಿಸಿ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಪಾಲಕ ಅಭಿಯಂತರರು ತಬಸ್ಸು ಬಾನು ಅವರು ಮಾತನಾಡಿ ರೈತರನ್ನು ಪ್ರೀತಿ ವಿಶ್ವಾಸದಿಂದ ಮಾತನಾಡಿಸಿ ನಾನು ಒಬ್ಬ ರೈತ ಮಗಳು ರಾತ್ರಿ ಸಮಯದಲ್ಲಿ ನೀವು ಕೊಳವೆ ಬಾವಿಗೆ ಸಿಂಗಲ್ ಫೀಸ್ ಹಾಕಿಕೊಂಡು ಓಡಿಸಿದರಿಂದ ವಿದ್ಯುತ್ ಲೈನ್ ಕಟ್ಟಾಗುವ ಸಂದರ್ಭ ಬರುತ್ತೆ ಅದರಿಂದಾಗಿ ವಿದ್ಯುತ್ ಸಂಪರ್ಕ ಕಟ್ ಆಗುತ್ತದೆ ನೀವು ದಯವಿಟ್ಟು ಸಿಂಗಲ್ ಪಿಜನ್ ಹಾಕಿಕೊಂಡು ಓಡಿಸಬಾರದು. ನಾವು ರೈತರ ಜಮೀನುಗಳಿಗೆ ಹಗಲು ಮತ್ತು ರಾತ್ರಿಯ ಸಮಯದಲ್ಲಿ ಸಮರ್ಪಕವಾಗಿ ನಾವು ವಿದ್ಯುತ್ ಪೂರೈಕೆ ಮಾಡುತ್ತಿದ್ದೇವೆ ಅದಕ್ಕೆ ರೈತರು ನಮ್ಮ ಜೊತೆ ಸಹಕಾರ ನೀಡಬೇಕು. ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳಬಾರದು ಎಂದು ತಿಳಿಸಿದರು. ಎಲ್ಲೇಮಾಳ ವಿದ್ಯುತ್ ಲಿಂಕ್ ಲೈನ್ ಮುಗಿದಿದೆ ಆ ಭಾಗದ ಜನರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಹನೂರು ತಾಲೂಕು ಘಟಕ ಅಧ್ಯಕ್ಷ ಚಂಗಡಿ ಕರಿಯಪ್ಪ. ರಾಜು ಶ್ರೀನಿವಾಸ ಮಾದಪ್ಪ ಮಾದೇಶ ಮೈಕಲ್. ಹಾಗೂ ವಿವಿಧ ಗ್ರಾಮದ ರೈತ ಮುಖಂಡರುಗಳು ಹಾಜರಿದ್ದರು. ಹನೂರು ಪೊಲೀಸ್ ವೃತ್ತ ನಿರೀಕ್ಷಕ ಮಂಜುನಾಥ್ ರವರು ಬಿಗಿ ಬಂದ ಬಸ್ ಏರ್ಪಡಿಸಲಾಗಿತ್ತು.

# ರೊಬೋಟಿಕ್ ತಂತ್ರಜ್ಞಾನ,ವಿಜ್ಞಾನ ವಸ್ತು ಪ್ರದರ್ಶನ



**ಶಿಡ್ಲಘಟ್ಟ:** ಇತ್ತೀಚಿನ ವರ್ಷಗಳಲ್ಲಿ ರೊಬೋಟಿಕ್ ತಂತ್ರಜ್ಞಾನ ಹೆಚ್ಚು ಪ್ರಚಲಿತ ಹಾಗೂ ಅನಿವಾರ್ಯ ವಾಗುತ್ತಿದ್ದು, ಈ ತಂತ್ರಜ್ಞಾನದ ಬಗ್ಗೆ ಶಾಲಾ ಮಕ್ಕಳಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಮೂಡಬೇಕೆಂಬ ಕಾರಣದಿಂದ ರೊಬೋಟಿಕ್ ತಂತ್ರಜ್ಞಾನದ ಮೇಲೆ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಶಾರದಾ ವಿದ್ಯಾಸಂಸ್ಥೆಯ ಶ್ರೀಕಾಂತ್ ತಿಳಿಸಿದರು.

ನಗರದ ಶಾರದಾ ವಿದ್ಯಾಸಂಸ್ಥೆಯಲ್ಲಿ ನಡೆದ ರೊಬೋಟಿಕ್ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಅವರು ಮಾತನಾಡಿದರು.

ತಂತ್ರಜ್ಞಾನ ಬಳಸಿಕೊಳ್ಳದೆ ಯಾವ ಕ್ಷೇತ್ರದಲ್ಲೂ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗದು,ಪ್ರಸ್ತುತ ಜಗತ್ತಿನಲ್ಲಿ ಎಲ್ಲಾ ಕ್ಷೇತ್ರಗಳನ್ನೂ ತಂತ್ರಜ್ಞಾನ ಆವರಿಸಿಕೊಂಡಿದೆ ಎಂದರು. ಸುಮಾರು 25ಕ್ಕೂ ಹೆಚ್ಚು ವಿದ್ಯಾರ್ಥಿಗಳ ತಂಡಗಳು ರೊಬೋಟಿಕ್ ತಂತ್ರಜ್ಞಾನದ ಬಗ್ಗೆ ನಾನಾ ರೀತಿಯ ವಸ್ತು ಪ್ರದರ್ಶನಗಳನ್ನು ಏರ್ಪಡಿಸಿದ್ದು, ಪೋಷಕರು, ಸಾರ್ವಜನಿಕರಿಗೆ ಅದರ ವಿವರಗಳನ್ನು ನೀಡುತ್ತಿದ್ದು ಸಂತಸ ತಂದಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾರದಾವಿದ್ಯಾಸಂಸ್ಥೆ ಅಧ್ಯಕ್ಷರಾದ ಎ.ಆರ್. ಮುನಿರತ್ನಂ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರೊಫೇಸ್ರ ಸುಗುಣ, ಕಾರ್ಯದರ್ಶಿಸುಮನ್, ಕೆ.ಮೂರ್ತಿ ಸಾಮ್ರಾಟ್, ಮುಖ್ಯ ಶಿಕ್ಷಕರಾಜೇಶ್, ಸಿದ್ದರಾಜು, ವ್ಯವಸ್ಥಾಪಕ ನಿರ್ದೇಶಕಿ ವಂದನ, ನರಸಿಂಹ ಮೂರ್ತಿ, ಯುವಿ ಪೆಪ್ ಸಂಸ್ಥೆಯ ಕಿರಣ್ ಹಾಜರಿದ್ದರು.

## ಕಣ್ಣಿದ್ದು ಕುರುಡರಂತಾದ ಕಂದಾಯ ಅಧಿಕಾರಿಗಳು



**ಮುಳಬಾಗಿಲು:** ನೂರಾರು ಎಕರೆ ಗೋಮಾಳ ಜಮೀನಿಗೆ ಆಕ್ರಮವಾಗಿ ಕಲ್ಲುಬಂಡೆಗಳಿಗೂ ಕಾನೂನಿನ ಹಾಗೂ ಕಂದಾಯ ಅಧಿಕಾರಿಗಳ ಭಯವಿಲ್ಲದೆ ರಾಜರೋಷವಾಗಿ ಕಾಂಪೌಂಡ್‌ಗಳನ್ನು ನಿರ್ಮಿಸಿ ಈ ಸ್ವತ್ತು ನಮ್ಮ ತಾತನದು ಎಂದು ನಾಮ ಫಲಕಗಳು ಆಳವಡಿಸುತ್ತಿದ್ದರೂ ಕಂದಾಯ ಅಧಿಕಾರಿಗಳು ಕಣ್ಣಿದ್ದು ಕುರುಡರಂತೆ ವರ್ತನೆ ಮಾಡುತ್ತಿದ್ದಾರೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಅವ್ಯವಸ್ಥೇಯ ವಿರುದ್ದ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಲ್ಲುಬಂಡೆಗಳಿಗೆ ಕಾಂಪೌಂಡ್ ಆಕ್ರಮವಾಗಿ ನಿರ್ಮಿಸುತ್ತಿದ್ದಾರೆ ನಿಲ್ಲಿಸಿ ಎಂದು ಅವನಿ, ಕಿರುಮಣಿ ಮಿಟ್ಟೆ ಕಂದಾಯ ಅಧಿಕಾರಿಗಳಿಗೆ ದಾಖಲೆಗಳ ಸಮೇತ ದೂರು ನೀಡಿದರೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಆನಂತರ ಕ್ರಮ ಕೈಗೊಳ್ಳುತ್ತೇನೆಂದು ಬೇಜವಬ್ದಾರಿ ಉತ್ತರ ನೀಡಿದರೆ ಇನ್ನೂ ಸರ್ಕಾರಿ ಆಸ್ತಿಗಳನ್ನು ಉಳಿಸಲು ಯಾರಿಗೆ ದೂರು ನೀಡಬೇಕು ಇಲ್ಲವೇ ರೈತರೇ ಕಾನೂನು ಕೈಗೆತ್ತಿಕೊಳ್ಳಬೇಕೆ ಎಂದು ಹಿರಿಯ ಅಧಿಕಾರಿಗಳನ್ನು ಪ್ರಶ್ನೆ ಮಾಡಿದರು.

ತಾಲೂಕಿನ ದೇವರಾಯಸಮುದ್ರ, ಕಿರುಮಣಿ ಹಾಗೂ ನಕಲಿ ಸಾಗುವಳಿ ಚೀಟಿ ಸಿ.ಬಿ.ಐ ಗೆ ಒಪ್ಪಿಸಿ ಭೂ ಗಳ್ಳರ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಬೇಕೆಂದು ಫೆ.25 ರ ಮಂಗಳವಾರ ಜಾನುವಾರುಗಳ ಸಮೇತ ಉಪವಿಭಾಗಧಿಕಾರಿಗಳ ಕಚೇರಿ ಮುತ್ತಿಗೆ ಹಾಕಲು ಪ್ರವಾಸಿಮಂದಿರದಲ್ಲಿ ಕರೆದಿದ್ದ ರೈತ ಸಂಘದ ಸಭೆಯಲ್ಲಿ ತಿರ್ಮಾನಿಸಲಾಯಿತು.

ಕಲ್ಲುಬಂಡೆ ರಾತ್ರಿ ಕಳೆದು ಹಗಲು ನೋಡಿದರೆ ಬಂಡೆ ಮೇಲೆ ಮಣ್ಣು ತುಂಬಿ ಬೊವಿ ಇನಾಂತಿ, ತಳಾರ್ ಇನಾಂತಿ, ದೋಬಿ ಇನಾಂತಿ ಈ ಜಮೀನುಗಳು ಮಾಯವಾಗಿ ರಾಜಾರೋಷವಾಗಿ 40-50 ವರ್ಷಗಳ ಹಿಂದೆ ಮಂಜೂರಾತಿ ಯಾದಂತೆ ಕಡತಗಳನ್ನು ಸೃಷ್ಟಿಸಿ ಕಣ್ಣುಂದೆಯೇ ಕೋಟಿ ಕೋಟಿ ಬೆಲೆ ಬಾಳುವ ಸರ್ಕಾರಿ ಆಸ್ತಿಗಳು ಭೂಗಳ್ಳರ ಪಾಲಾಗುತ್ತಿದ್ದು, ಅವರಿಗೆ ರಕ್ಷಾ ಕವಚದಂತೆ ಕಂದಾಯ ಅಧಿಕಾರಿಗಳು ನಿಂತಿದ್ದಾರೆಂದು ಆರೋಪಿಸಿದರು.

ಹತ್ತಾರು ವರ್ಷಗಳಿಂದ ಭೂಮಿ ಇಲ್ಲದ ನೂರಾರು ರೈತರು ಅರ್ಜಿ ಸಲ್ಲಿಸಿಕೊಂಡು ಜಾತಕ ಪಕ್ಷಿಗಳಂತೆ ಸಾಗುವಳಿ ಚೀಟಿಗಾಗಿ ಎದುರು ನೋಡುತ್ತಿದ್ದರೆ ಬಡವನ ಆಸೆಗೆ ತಣ್ಣೀರು ಹಾಕಿ ರಿಯಲ್ ಎಸ್ಟೇಟ್ ದಂದೆ ಕೋರರಿಗೆ ನಿಯತ್ತಾಗಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನುಗಳನ್ನು ಮಾರಾಟ ಮಾಡಿ ರಿಯಲ್ ಎಸ್ಟೇಟ್ ಪಾಲುದಾರರಾಗಿದ್ದಾರೆಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾದ್ಯಕ್ಷ ಈಕಂಬಳ್ಳಿ ಮಂಜುನಾಥ್ ಮಾತನಾಡಿ ಜಾನುವಾರುಗಳಿಗೆ ಮೀಸಲಿಡಲು ತಾಲ್ಲೂಕಾಡಳಿತ ತಿಂಗಳಾನು ಗಟ್ಟಲೆ ಹುಡುಕಾಡಿದರು ಸರ್ಕಾರಿ ಗೋಮಾಳ ಸಿಗುವುದಿಲ್ಲ, ಆದರೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ನೂರಾರು ಎಕರೆ ಕಲ್ಲುಬಂಡೆಗಳ ಜಮೀನು ಯಾರ ಆಸ್ತಿ ಭೂಗಳ್ಳರದ ಇಲ್ಲವೇ ಕಂದಾಯ ಅಧಿಕಾರಿಗಳದ್ದಾ ಎಂದು ಪ್ರಶ್ನೆ ಮಾಡುವ ಜೊತೆಗೆ ಹಿಂದಿನ ತಹಶೀಲ್ದಾರ್‌ರವರ ಅವದಿಯಲ್ಲಿ ನಡೆದಿರುವ ಆಕ್ರಮ ಸಾಗುವಳಿ ಚೀಟಿ ತನಿಖೆ ಮಾಡಿ ರದ್ದುಗೊಳಿಸಿ ಭೂಗಳ್ಳರ ಪಾಲಾಗಿರುವ ಸಾವಿರಾರು ಎಕರೆ ಗೋಮಾಳ ಉಳಿಸುವ ಜೊತೆಗೆ ಕೆರೆ ರಾಜಕಾಲುವೆಗಳನ್ನು ತೆರೆವುಗೊಳಿಸಲು ವಿಫಲವಾಗಿರುವ ತಾಲ್ಲೂಕು ಆಡಳಿತದ ವಿರುದ್ದ ಫೆ.25ರ ಮಂಗಳವಾರ ಉಪ ವಿಭಾಗಧಿಕಾರಿಗಳ ಕಚೇರಿಗೆ ಜಾನುವಾರುಗಳ ಸಮೇತ ಮುತ್ತಿಗೆ ಹಾಕಿ ಭೂ ಹಗರಣವನ್ನು ಸಿ.ಬಿ.ಐಗೆ ಒಪ್ಪಿಸುವಂತೆ ಅಗ್ರಹಿಸಲಾಗುವುದೆಂದರು.

ಸಭೆಯಲ್ಲಿ ತಾಲ್ಲೂಕಾದ್ಯಕ್ಷ ಯಲುವಳ್ಳಿ ಪ್ರಭಾಕರ್ , ಹೆಬ್ಬಣಿ ಆನಂದ್‌ರೆಡ್ಡಿ, ಪಾರುಕ್‌ಪಾಷ, ರಾಜೇಶ್, ಭಾಸ್ಕರ್, ಪುತ್ತೇರಿ ರಾಜು, ಸುಪ್ರೀಂ ಚಲ, ಗೀರೀಶ್, ಶಿವ, ಮುಂತಾದವರಿದ್ದರು.

## ಕಲಿಕೆಗೆ ಕಲಿಕಾ ಹಬ್ಬ ಸಹಕಾರಿ:ರಾಜೇಂದ್ರ ಗೌಡ



**ಮುಳಬಾಗಿಲು:** ಸಂತಸದಾಯಕವಾದ ಕಲಿಕೆಗೆ ಕಲಿಕಾ ಹಬ್ಬ ಸಹಕಾರಿಯಾಗಿದೆ ಎಂದು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಆರ್.ಆರ್. ರಾಜೇಂದ್ರ ಗೌಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮುಳಬಾಗಿಲು ತಾಲೂಕಿನ ರಾಜೇಂದ್ರ ಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ವತಿಯಿಂದ ಎಫ್ ಎಲ್ ಎನ್ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗುತ್ತಿದೆ ಇದರಿಂದ ಶಾಲೆಗಳು ಮುಚ್ಚುವ ಸ್ಥಿತಿಗೆ ಹೋಗುತ್ತಿವೆ ಕನ್ನಡ ಶಾಲೆಗಳು ಉಳಿಯಬೇಕಾದರೆ ಸರ್ಕಾರ ಎಚ್ಚೆತ್ತುಕೊಂಡು ಶಾಲೆಗಳಿಗೆ ಭೌತಿಕ ಸೌಲಭ್ಯಗಳನ್ನು ನೀಡಿ ಸರ್ಕಾರಿ ಶಾಲೆಗಳನ್ನು ಉಳಿಸುವ ಕೆಲಸ ಆಗಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿ ಓದುವುದಕ್ಕೆ ಬಹಳಷ್ಟು ಜನ ಹೋಗುತ್ತಿಲ್ಲ ಆದರೆ ಸರ್ಕಾರಿ ಕೆಲಸ ಮಾತ್ರ ಬೇಕು ಕೂಡಲೇ ಸರ್ಕಾರ ಸರ್ಕಾರಿ ಶಾಲೆಯಲ್ಲಿ ಓದಿದವರಿಗೆ ಮಾತ್ರ ಸರ್ಕಾರಿ ಉದ್ಯೋಗ ನೀಡಲಾಗುತ್ತದೆ ಎಂಬ ಕಾನೂನನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು ಇಂತಹ ಕಾರ್ಯಕ್ರಮಗಳು ಸರ್ಕಾರಿ ಶಾಲೆಗಳಲ್ಲಿ ನಡೆಯುವುದು ನನಗೆ ಬಹಳ ಸಂತೋಷದಾಯಕವಾಗಿದೆ ನಾನು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ನನಗೆ ಅದೃಷ್ಟವಾಗಿದೆ ಎಂದರು.

ಇಸಿ ಓ ಮುನಿಸ್ವಾಮಿ ಮಾತನಾಡಿ ಸಮುದಾಯದೊಡನೆ ಉತ್ತಮ ಬಾಂಧವ್ಯವನ್ನು ವೃದ್ಧಿಸಲು ಕಲಿಕಾ ಹಬ್ಬ ಸಹಕಾರಿಯಾಗಿದೆ ಕಲಿಕೆಯಲ್ಲಿ ನಿಧಾನಗತಿ ಮಕ್ಕಳು ಮುಖ್ಯ ವಾಹಿನಿಗೆ ಬರಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಅಂತಹ ವಿದ್ಯಾರ್ಥಿಗಳಲ್ಲಿ ಕಲಿಕೆಯ ವೇಗ ಮತ್ತು ವೈವಿಧ್ಯಮಯ ವಿಧಾನಗಳಿಂದ ಚಟುವಟಿಕೆಗಳನ್ನು ಈ ಕಲಿಕಾ ಹಬ್ಬದಲ್ಲಿ ಹಮ್ಮಿಕೊಳ್ಳಲಾಗುವುದು ಇಲ್ಲಿ ಗಟ್ಟಿಬಹುದು ,ಕಥೆ ಹೇಳುವುದು, ಕೈಬರಹ ಸಂತೋಷದಾಯಕ ಗಣಿತ ,ಮೆಮೊರಿ ಪರೀಕ್ಷೆ, ರಸಪ್ರಶ್ನೆ, ಪೋಷಕರು ಮತ್ತು ಮಕ್ಕಳ ಸಹ ಸಂಬಂಧ ವಲಯ, ಕಥೆ ಕಟ್ಟುವುದು ಈ ಚಟುವಟಿಕೆಗಳನ್ನು ಈ ದಿನ ಹಮ್ಮಿಕೊಳ್ಳಲಾಗಿದೆ ವಿದ್ಯಾರ್ಥಿಗಳೆಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ತೋರಿಸಬೇಕು ಎಂದು ಹೇಳಿದರು. ತೀರ್ಪುಗಾರರು ಉತ್ತಮವಾದಂತಹ ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಲು ತಿಳಿಸಿದರು .

ಶಾಲೆಯ ಮುಖ್ಯ ಶಿಕ್ಷಕ ಹಾಗೂ ತಾಲೂಕು ಭಾರತೀಯ ಸೇವಾದಳದ ಘಟಕದ ಅಧ್ಯಕ್ಷ ವೇಣುಗೋಪಾಲ್ ಮಾತನಾಡಿ ಈ ಚಟುವಟಿಕೆಗಳು ವಿದ್ಯಾರ್ಥಿಗಳ ಭಾವನಾತ್ಮಕ ಮತ್ತು ದೈಹಿಕವಾದ ಕೌಶಲ್ಯಗಳನ್ನು ಮಕ್ಕಳಲ್ಲಿ ಅಭಿವೃದ್ಧಿಪಡಿಸಲು ಒಂದು ಸಾಧನವಾಗಿ ಕೆಲಸ ಮಾಡುತ್ತದೆ ತರಗತಿಗಳಲ್ಲಿ ನಿರೀಕ್ಷಿತ ಕಲಿಕಾ ಗುಣಮಟ್ಟವನ್ನು ಕಾಣಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದೆ ಎಂದರು. ಚಟುವಟಿಕೆಗಳಲ್ಲಿ ಭಾಗವಹಿಸಿ ವಿಜೇತರದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ವಿತರಿಸಲಾಯಿತು

ವೈದ್ಯಾಧಿಕಾರಿ ರಾಘವೇಂದ್ರ, ಗ್ರಾಮ ಸದಸ್ಯರಾದ ಕೆ ಎಸ್ ಜಗಪತಿ ಗೌಡ, ಹನುಮಪ್ಪ ಸಿಆರ್‌ಪಿಗಳಾದ ವರದರಾಜ್, ಮಹೇಶ್ ಕುಮಾರ್, ಹಿರಿಯ ಶಿಕ್ಷಕರಾದ ಪ್ರಭಾಕರ್, ಉದಯ್ ಕುಮಾರ್, ಲಕ್ಷ್ಮಿಕಾಂತಮ್ಮ, ನಾಗರತ್ನಮ್ಮ ಸುನಿತಾ, ಜಯಮ್ಮ, ಸುಜಾತ ಮತ್ತು ತೀರ್ಪುಗಾರರಾದ ಶಿವಕುಮಾರ್, ರಾಜಶೇಖರ್, ಮಲ್ಲೇಶ್, ಕಸ್ತೂರಿ, ಮತ್ತಿತರರು ಇದ್ದರು.

## ರೈತರ ಸಮಗ್ರ ಮಾಹಿತಿ ಸೌಲಭ್ಯಗಳ ಪಡೆದುಕೊಳ್ಳುವಂತೆ ರೈತರಿಗೆ ಕರೆ



**ನಾಗಮಂಗಲ:** ರೈತರ ಸಮಗ್ರ ಮಾಹಿತಿ ಹಾಗೂ ಕೃಷಿಗೆ ಸಂಬಂಧಪಟ್ಟ ಮಾಹಿತಿ ನೀಡುವ ರೈತ ಕೇಂದ್ರದ ಸದುಪಯೋಗಪಡಿಸಿಕೊಳ್ಳುವಂತೆ ಸಚಿವರಾದ ಚೆಲುವರಾಯಸ್ವಾಮಿ ಕರೆ ನೀಡಿದರು.

ಅವರು ನಾಗಮಂಗಲ ತಾಲೂಕು ಚಿನ್ಯ ಗ್ರಾಮದಲ್ಲಿ ನೂತನವಾಗಿ ರೈತ ಸಂಪರ್ಕ ಕೇಂದ್ರದ ಕಟ್ಟಡಕ್ಕೆ ಭೂಮಿ ಪೂಜೆ ಮಾಡುವ ಮಾತನಾಡಿದರು.

ಸಚಿವನಾದ ನಂತರ ಸುಮಾರು 113 ವರ್ಷಗಳ ಕಳೆದರೂ ಕೃಷಿ ಇಲಾಖೆಗೆ ನೂತನ ಕಟ್ಟಡಗಳು ಇಲ್ಲದೆ ಕಾರಣ ಜಿಲ್ಲೆ ಮತ್ತು ತಾಲೂಕು ಹೋಬಳಿ ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರದ ಕಟ್ಟಡಗಳು ಅನುಷ್ಠಾನ ಮಾಡಿದ್ದು ಈಗಾಗಲೇ ಕಾಮಗಾರಿಗಳು ನಡೆಯುತ್ತಿದ್ದು ಇಂತಹ ಸೌಲಭ್ಯಗಳು ಕೃಷಿ ಕ್ಷೇತ್ರದಲ್ಲಿ ಹೊಸತನದ ಸಮಗ್ರ ಕೃಷಿ ಮಾಹಿತಿಯ ನೀಡುವ ಉದ್ದೇಶದಿಂದ ತಾಲೂಕಿನಲ್ಲಿ ನೂತನ ಕಟ್ಟಡಗಳನ್ನು ಕಟ್ಟಿಸುವ ಮುಖಾಂತರ ಕೃಷಿ ಅಧ್ಯಯನ ವಿಚಾರ ರೂಡಿಸಿಕೊಳ್ಳುವ ಕೇಂದ್ರದಲ್ಲಿ ಸಾರ್ವಜನಿಕರು ರೈತರು ಸದುಪಯೋಗಪಡಿಸಿಕೊಳ್ಳುವಂತೆ ಮಾತನಾಡಿದರು.

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡುವ ಸೇವೆ ದೊರೆತಿದ್ದು ಹೊಸ ಬದಲಾವಣೆ ಕೃಷಿ ಕ್ಷೇತ್ರದ ಹೊಸ ಅಧ್ಯಯನ ಆರಂಭಕ್ಕೆ ಮುನ್ನಡಿ ನೀಡಿದ್ದು ಮುಂದಿನ ದಿನಗಳಲ್ಲಿ ರೈತರಿಗೆ ಸ್ಥಳದಲ್ಲಿ ಮಾಹಿತಿ ಪರಿಹಾರ ದೊರಕುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಕೃಷಿ ಜಂಟಿ ನಿರ್ದೇಶಕರಾದ ಅಶೋಕ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಮುಖಂಡರು ಗ್ರಾಮಸ್ಥರು ಹಾಜರಿದ್ದರು.




**ನಗರದ ಬಿಜೆಪಿ ಕೇಂದ್ರ ಕಚೇರಿ ಜಗನ್ನಾಥ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಸಂಸದ ಪಿ ಸಿ ಮೋಹನ್ ಮಾಜಿ ಸಚಿವರು ಹಾಗೂ ಶಾಸಕ ಕೆ ಗೋಪಾಲಯ್ಯ ಶಾಸಕ ಉದಯ್ ಗರುಡಾಚಾರ್ ರಾಜ್ಯ ಮುಖ್ಯ ವಕ್ತಾರ ಅಶ್ವಥ್ ನಾರಾಯಣ್ ಪಾಲ್ಗೊಂಡಿದ್ದರು**

## 3 ಸಾವಿರ ಕೋಟಿ ರೂ. ಪ್ರಾಜೆಕ್ಟ್‌ಗೆ ಮನವಿ:ಸಿಎಂ ಅನುದಾನ ನೀಡುವ ವಿಶ್ವಾಸ

**ಮೈಸೂರು:** ಚಾಮರಾಜನಗರ ಜಿಲ್ಲೆಗೆ ಹಿಂದುಳಿದ ಜಿಲ್ಲೆ ಎಂದು ಇರುವ ಹಣೆಪಟ್ಟಿ ತೆಗೆದುಹಾಕಲು ಅಲ್ಲಿನ ಸಂಸದ ಸುನಿಲ್ ಬೋಸ್ ಪ್ರಯತ್ನಕ್ಕೆ ಮುಂದಾಗಿದ್ದು ಈ ಸಂಬಂಧ ಸಿಎಂ ಸಿದ್ದರಾಮಯ್ಯ ಬಳಿ ಅನುದಾನಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತು ಮಾತನಾಡಿರುವ ಸಂಸದ ಸುನೀಲ್ ಬೋಸ್, ನಂಜುಂಡಪ್ಪ ವರದಿ ಪ್ರಕಾರ ಚಾಮರಾಜನಗರ ಜಿಲ್ಲೆ ಹಿಂದುಳಿದ ಜಿಲ್ಲೆ ಅಂತ ಘೋಷಣೆ ಆಗಿದೆ ಅದರ ಅನುಗುಣವಾಗಿ ವಿಶೇಷ ಪ್ಯಾಕೇಜ್ ಗಳನ್ನು ಕೊಡುವ ಕೆಲಸ ಆಗುತ್ತಿಲ್ಲ. ನಾನು ಕೂಡ ಸಿಎಂ ಸಾಹೇಬರ ಗಮನಕ್ಕೆ ತಂದು ನನ್ನ ಕ್ಷೇತ್ರ ವ್ಯಾಪ್ತಿಯ ಎಚ್ ಡಿ ಕೋಟೆಯಿಂದ ಹಿಡಿದು ಹನೂರುವರೆಗೆ ವ್ಯವಸಾಯ ಮಾಡದೆ ಬರಡು ಬಿದ್ದಿರುವ ಭೂಮಿಯನ್ನ ವ್ಯವಸಾಯದತ್ತ ತರುವ ಯೋಜನೆಯನ್ನ ರೂಪಿಸಲು ಸುಮಾರು 3 ಸಾವಿರ ಕೋಟಿ ಪ್ರಾಜೆಕ್ಟ್ ಮನವಿ ಮಾಡಿದ್ದೇನೆ ಹಂತ ಹಂತವಾಗಿ ಹಣ ಬಿಡುಗಡೆ ಸಿಎಂ ಬಳಿ ಮನವಿ ಮಾಡಿದ್ದೇನೆ.

ಇದರಿಂದ ಬರಡು ಭೂಮಿಗಳಿಗೆ ನೀರಾವರಿ ಒದಗಿಸಬಹುದು. ಈಗಾಗಲೇ ನೀರಾವರಿ ಸೌಲಭ್ಯ ಇಲ್ಲದೆ ಅಲ್ಲಿನ ನಾಲೆಗಳು ಪಾಳು ಬಿದ್ದಂತಿವೆ. ಈಗಾಗಲೇ ಯೋಜನೆಯ ಡಿಪಿಆರ್ ತಯಾರಾಗಿದೆ. ಮುಖ್ಯಮಂತ್ರಿಗಳು ಯೋಜನೆಗೆ ಅನುದಾನ ನೀಡುವ ವಿಶ್ವಾಸ ಇದೆ ಎಂದು ಸಂಸದ ಸುನಿಲ್ ಬೋಸ್ ತಿಳಿಸಿದರು.

## ಅಧಿಕಾರಿಗಳೇ ಬಿ ಖಾತಾ ಅಭಿಯಾನ ಯಶಸ್ವಿಗೊಳಿಸಿ





**ಚಿಕ್ಕಬಳ್ಳಾಪುರ:** ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಅನಧಿಕೃತ, ರೆವಿನ್ಯೂ ಬಡಾವಣೆಗಳಿಗೆ ಬಿ ಖಾತಾ ಅಭಿಯಾನ ಯಶಸ್ವಿಯಾಗುವಲ್ಲಿ ನಗರಸಭೆ ಆಯುಕ್ತರು ಮತ್ತು ಸಿಬ್ಬಂದಿಯ ಪಾತ್ರ ಪ್ರಮುಖವಾಗಿದೆ ಬಡವರ ಬದುಕಿಗೆ ಆಸರೆಯಾಗುವ ಈ ಅಭಿಯಾನವನ್ನು ಯಜ್ಞದ ರೀತಿ ಭಾವಿಸಿ ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಮಾಡಬೇಕಿದೆ ಎಂದು ಶಾಸಕ ಪ್ರದೀಪ್ ಈಶ್ವರ್ ನಗರಸಭೆ ಸಿಬ್ಬಂದಿಗೆ ಉತ್ತೇಜನ ನೀಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯಿತಿಯ ಸರ್. ಎಂ.ವಿ. ಸಭಾಂಗಣದಲ್ಲಿ ಮಂಗಳವಾರ ಬಿ.ಖಾತಾ ಸಂಬಂಧ ಏರ್ಪಡಿಸಿದ್ದ ನಗರಸಭೆ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**90 ದಿನಗಳ ಗಡುವು:** 90 ದಿನಗಳ ಕಾಲ ನಡೆಯುವ ಬಿ.ಖಾತಾ ಅಭಿಯಾನವನ್ನು ಬಹಳ ಯಶಸ್ವಿಯಾಗಿ ಮುಗಿಸುವ ಗುರುತರ ಜವಾಬ್ದಾರಿ ಶಾಸಕನಾಗಿ ನನ್ನನ್ನೂ ಸೇರಿದಂತೆ ನಗರಾಡಳಿತ, ಆಯುಕ್ತರು,ಈ ಕಾರ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಮೇಲಿದೆ. ನಾವೆಲ್ಲಾ ನಮ್ಮ ನಮ್ಮ ಕೆಲಸವನ್ನು ಬದ್ಧತೆಯಿಂದ ಮಾಡಿದಲ್ಲಿ ಬಡವರ ಮನೆಯಲ್ಲಿ ನಂದಾದೀಪ ಬೆಳಗಲಿದೆ. ಅದರ ಶ್ರೇಯ ನಮಗೂ ಸಲ್ಲಲ್ಲಿದೆ ಎಂದರು

**ಕರ್ತವ್ಯಲೋಪ ಸಹಿಸಲ್ಲ:** ಫೆ.21, 22 ಮತ್ತು 23 ರಂದು ನಗರದ ಎಲ್ಲಾ 31ಬಡಾವಣೆಗಳಲ್ಲಿ ಬೆಳಗ್ಗೆ 8 ರಿಂದ ಸಂಜೆ 4:30ರವರೆಗೆ ಏಕಕಾಲಕ್ಕೆ ನಡೆಯುವ ಬಿ ಖಾತಾ ಅಭಿಯಾನದ ಸಿಬ್ಬಂದಿಗೆ ಬೇಕಾದ ಊಟ ತಿಂಡಿಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗುವುದು.ಈ ಅವಧಿಯಲ್ಲಿ ಪ್ರತಿಯೊಬ್ಬ ಸಿಬ್ಬಂದಿಯೂ ನಿಮಗೆ ಗುರ್ತುಪಡಿಸಿದ ಸ್ಥಳದಲ್ಲಿಯೇ ಇದ್ದು ನಿಮ್ಮಲ್ಲಿ ಬರುವ ನಿವಾಸಿಗಳಿಂದ ಸರಕಾರ ನಿಗದಿಪಡಿಸಿರುವ ಸೀಮಿತ ದಾಖಲಾತಿಗಳನ್ನು ಪಡೆದು ಕೆಲಸ ಮಾಡಬೇಕು.ಅವರಿಂದ ಸರಕಾರಿ ತೆರಿಗೆ ಬಿಟ್ಟು ಬೇರೇನೂ ಪಡೆಯಯುವಂತಿಲ್ಲ. ಖಾತೆ ಬಯಸಿ ಬರುವ ನಿವಾಸಿಗಳಿಗೆ ಅನಗತ್ಯ ಕಿರುಕುಳ ನೀಡುವುದು, ದಲ್ಲಾಳಿಗಳಿಗೆ ಪುರಸ್ಕಾರ ನೀಡುವುದು,ಕರ್ತವ್ಯಲೋಪ ಎಸಗಿ ಭ್ರಷ್ಟಾಚಾರದಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಕಾನೂನು ಪ್ರಕಾರ ತಲೆದಂಡವಾಗಲಿದೆ ಎಂದು ಎಚ್ಚರಿಸಿದರು.

**ಅಧಿಕಾರಿಗಳಿಗೆ ಮನ್ನಣೆ:** ಬಿ.ಖಾತಾ ಅಭಿಯಾನದಲ್ಲಿ ಭಾಗಿಯಾಗಿರುವ ಸಿಬ್ಬಂದಿ ಯಾವುದೇ ದೂರುಗಳಿಗೆ ಆಸ್ಪದ ನೀಡದೆ ದಕ್ಷತೆಕಾಪಾಡಿಕೊಳ್ಳುವುದು ಮುಖ್ಯ, ಮೂರು ದಿನಗಳ ಅವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖಾತೆ ಮಾಡಿಕೊಡಲು ನೆರವಾದ ಸಿಬ್ಬಂದಿಗೆ ಶಾಸಕರು ಸನ್ಮಾನ ಮಾಡಿ ಪ್ರಶಂಸಾ ಪತ್ರ ನೀಡಲಾಗುವುದು, ನಗರಸಭೆ ಸಿಬ್ಬಂದಿ ಮೇಲೆ ಅಪಾರವಾದ ನಂಬಿಕೆಯಿದೆ. ನಿಮ್ಮ ಬಳಿ ಬರುವ ನಾಗರೀಕರ ಬಳಿ ನಯವಾಗಿ ಮಾತನಾಡಿ ಖಾತೆದಾರರಲ್ಲದ ಮೂರನೇ ವ್ಯಕ್ತಿ ತರುವ ಅರ್ಜಿಗಳನ್ನು ಸ್ವೀಕರಿಸಲೇ ಬೇಡಿ, ಖುದ್ದಾಗಿ ಬರುವವರ ಕೆಲಸ ವಿಳಂಬವಿಲ್ಲದೆ ಮಾಡಿಕೊಡಿ, ಅಭಿಯಾನದ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಬಿಡಿ ಎಂದು ತಾಕೀತು ಮಾಡಿದರು.

**ಒನ್ ಟೈಮ್ ಸಲ್ಯೂಷನ್:** ಒನ್ ಟೈಮ್ ಸಲ್ಯೂಷನ್ ಅಡಿಯಲ್ಲಿ 90 ದಿನಗಳ ಒಳಗೆ ಬಿ ಖಾತಾ ಮಾಡಿಕೊಳ್ಳಲು ರಾಜ್ಯ ಸರಕಾರ ಅವಕಾಶ ಮಾಡಿಕೊಟ್ಟಿದೆ. ಈ ಅವಧಿ ಹೊರತುಪಡಿಸಿದರೆ

ಮತ್ತೆ ಎಂದೂ ಕೂಡ ಅನಧಿಕೃತ ಬಡಾವಣೆಗಳಿಗೆ ಖಾತೆ ಮಾಡಿಕೊಳ್ಳಲು ಅನುಮತಿ ನೀಡುವುದಿಲ್ಲ. ಹೀಗಾಗಿಯೇ ಈ ಸುವರ್ಣಾವಕಾಶವನ್ನು ತಪ್ಪಿಸಿಕೊಳ್ಳದಂತೆ ಮಾಡಲು ಪರಿಶ್ರಮ ವಿದ್ಯಾರ್ಥಿಗಳನ್ನು ಕೂಡ ಬಳಸಿಕೊಂಡು ಮನೆಮನೆಗೆ ಬಿ ಖಾತಾ ಅಂದೋಲನದ ಕರಪತ್ರಗಳನ್ನು ಚಿಕ್ಕಬಳ್ಳಾಪುರ ನಗರದ ಪ್ರತಿಯೊಂದು ಮನೆಗೂ ತಲುಪಿಸುವ ಕೆಲಸ ಮಾಡುತ್ತಿದ್ದೇನೆ ಎಂದರು.

**4 ಸಾವಿರ ಖಾತೆದಾರರಿಗೆ ಅನುಕೂಲ:** ನಗರಸಭೆ ವ್ಯಾಪ್ತಿಯಲ್ಲಿ 22771 ಒಟ್ಟು ಖಾತೆಗಳಿದ್ದು, ಅದರಲ್ಲಿ 22932 ಡಿಜಿಟಲ್‌ಗೆ ಬಂದಿವೆ. 8062 ಕ್ಕೆ ಇ ಖಾತೆಗಳಾಗಿವೆ.ಈತದಿನದವರೆಗೆ 81 ಪ್ರಗತಿಯಲಿವೆ. ಬಾಕಿಯಿರುವ ಖಾತೆಗಳು 14648 ಇವೆ. ಚಿಕ್ಕಬಳ್ಳಾಪುರ ತಾಲೂಕಿನಲ್ಲಿ ಶೇ 36ರಷ್ಟು ಖಾತೆ ಆಗಲು ಬಾಕಿಯಿದೆ ಎಂದರು.

ಬಿ ಖಾತೆಗೆ ಬೇಕಾದ ದಾಖಲೆಗಳು:ಬಿ-ಖಾತೆ ಮಾಡಲು ಬೇಕಾದ ದಾಖಲಾತಿಗಳು ಹೀಗಿವೆ. 1.ಆಸ್ತಿಗೆ ಸಂಬಂಧಿಸಿದ ಸ್ವತ್ತಿನ ಮಾಲಿಕತ್ವ ಸಾಬೀತು ಪಡಿಸುವ ದಾಖಲಾತಿಗಳು ದಿನಾಂಕ 10.09.2024ರ ಪೂರ್ವದಲ್ಲಿ ನೋಂದಾಯಿತವಾದ ದಾನ ಪತ್ರ,ಮಾರಾಟ ಪತ್ರ,ವಿಭಾಗಪತ್ರ, ಹಕ್ಕು ಖುಲಾಸೆ ಪತ್ರಗಳು. 2.ಪ್ರಸಕ್ತ ಸಾಲಿನ ಋಣಭಾರ ಪತ್ರ. 3.ಚಾಲ್ತಿ ಸಾಲಿನ ಆಸ್ತಿ ತೆರಿಗೆ ಪಾವತಿ ರಸೀತಿ, 4.ಮಾಲಿಕರ ಪೋಟೋ, ಸ್ವತ್ತಿನ ಪೋಟೋ ಜಿಪಿಎಸ್‌ನಲ್ಲಿ ಹಾಕಬೇಕು. 5.ಮಾಲೀಕರ ಗುರುತಿನ ದಾಖಲೆ ಪ್ರತಿ ಕೊಟ್ಟು ಸರಕಾರ ನಿಧಿ ಮಾಡಿದ ತೆರಿಗೆ ಪಾವತಿಸಿ ಬಿ-ಖಾತೆ ಪಡೆಯಬಹುದು.10 ವರ್ಷದಿಂದ ತೆರಿಗೆ ಪಾವತಿ ಮಾಡದಿದ್ದರೂ ಪರವಾಗಿಲ್ಲ.ಈ ವರ್ಷದ ತೆರಿಗೆಯ ಡಬಲ್ ಪಾವತಿ ಮಾಡಿದರೆ ಸಾಕು ಅವರಿಗೆ ಬಿ ಖಾತೆ ಕೊಡುತ್ತೇವೆ ಎಂದರು.

**ಸಹಾಯವಾಣಿಗೆ ಕರೆ ಮಾಡಿ:** ಬಿ ಖಾತೆ ಸಂಬಂಧ ನಗರ ವಾಸಿಗಳಿಗೆ ಎದುರಾಗುವ ಯಾವುದೇ ಸಮಸ್ಯೆ ಇದ್ದಲ್ಲಿ ಟೋಲ್ ಫ್ರೀನಂಬರ್ 08156-27555 ಅಥವಾ ವಾಟ್ಸಪ್ ನಂಬರ್- 9239694523 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಶಾಸಕರು ತಿಳಿಸಿದರು.

ಈ ವೇಳೆ 31 ವಾರ್ಡ್ಗಳಲ್ಲಿ ಬಿ ಖಾತಾ ಆಂದೋಲನಕ್ಕೆ ನೇಮಕವಾಗಿರುವ ಅಧಿಕಾರಿಗಳು,ನಗರಸಭೆ ಆಯುಕ್ತ ಮನ್ಸೂರ್ ಅಲಿ ಉಪಸ್ಥಿತರಿದ್ದರು.

## 9 ವಿವಿಗಳ ಮುಚ್ಚುವ ಸರ್ಕಾರದ ನಿರ್ಧಾರ ಸ್ವಾಗತ: ಹೆಚ್.ಎವೆಂಕಟೇಶ್

**ಮೈಸೂರು:** ರಾಜ್ಯದ 9 ವಿಶ್ವ ವಿದ್ಯಾನಿಲಯಗಳನ್ನು ಮುಚ್ಚುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತ. ಯುಜಿಸಿ ನಿಯಮದ ಪ್ರಕಾರ ಈ ವಿಶ್ವ ವಿದ್ಯಾನಿಲಯಗಳು ಸ್ಥಾಪನೆ ಆಗಿಲ್ಲ. ಹೀಗಾಗಿ ನಾನೂ ಕೂಡ ವಿವಿಗಳನ್ನು ಮುಚ್ಚಲು ಒತ್ತಾಯ ಮಾಡುತ್ತೇನೆ ಎಂದು ಕೆಪಿಸಿಸಿ ವಕ್ತಾರ ಹೆಚ್ ಎ ವೆಂಕಟೇಶ್ ತಿಳಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಹೆಚ್.ಎ ವೆಂಕಟೇಶ್, ಬಿಜೆಪಿ ಆಡಳಿತದ ಅವಧಿಯಲ್ಲಿ ಯುಜಿಸಿ ನಿಯಮವನ್ನ ಗಾಳಿಗೆ ತೂರಿ ವಿವಿಗಳನ್ನ ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ವಿಶ್ವ ವಿದ್ಯಾನಿಲಯಗಳನ್ನ ಮುಚ್ಚಬೇಕು. ಈಗಾಗಲೇ ಇದು ಪರಿಶೀಲನೆ ಹಂತದಲ್ಲಿದ್ದು, ನಾವು ಕೂಡ ಸರ್ಕಾರವನ್ನ ಒತ್ತಾಯ ಮಾಡುತ್ತೇವೆ. ಸಿದ್ದರಾಮಯ್ಯ ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಾ ಬಂದಿದೆ. ಹೀಗಾಗಿ ಕೂಡಲೇ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಲಿ ಎಂದು ಆಗ್ರಹಿಸಿದರು.

ಉನ್ನತ ಶಿಕ್ಷಣ ಪ್ರತಿಯೊಬ್ಬರಿಗೂ ಅತ್ಯಂತ ಮಹತ್ವದ್ದು, 2035ರ ವೇಳೆಗೆ ಒಟ್ಟು ದಾಖಲಾತಿ ಅನುಪಾತ ಶೇಕಡ 50ರಷ್ಟು ತಲುಪಬೇಕು ಎಂಬುದು ವಿಶ್ವವಿದ್ಯಾಲಯ ಅನುದಾನ ಆಯೋಗ ಹಾಗೂ ಕೇಂದ್ರ ಸರ್ಕಾರದ ನಿಲುವು. ಈ ಹಿನ್ನೆಲೆಯಲ್ಲಿ ನೂತನ ವಿವಿಗಳನ್ನು ಸ್ಥಾಪಿಸಿಯೇ ಉನ್ನತ ಶಿಕ್ಷಣವನ್ನು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಿಸಬೇಕು ಎಂಬುದೇನಿಲ್ಲ. ದೇಶದ ಉನ್ನತ ಶಿಕ್ಷಣದಲ್ಲಿ ಒಟ್ಟಾರೆ ವಿದ್ಯಾರ್ಥಿಗಳ ದಾಖಲಾತಿ ಅನುಪಾತ 2024 -25ರ ಸರ್ವೇ ಪ್ರಕಾರ 28.4%. ಕರ್ನಾಟಕದಲ್ಲಿ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಅನುಪಾತ 36.2% . ಯಾವುದೇ ನೂತನ ವಿವಿಗಳ ಸ್ಥಾಪಿಸುವಾಗ ಆ ಭಾಗದ ಶೈಕ್ಷಣಿಕ ಅನಾನುಕೂಲದ ಬಗ್ಗೆ ಮೊದಲು ಗಮನಹರಿಸಬೇಕು ಎಂದರು.

ನೂತನ ವಿಶ್ವವಿದ್ಯಾಲಯಗಳ ಸ್ಥಾಪನೆ ಸಮರ್ಥಿಸಿಕೊಳ್ಳಲು ವಿಷನ್ , ಮಿಷನ್, ವ್ಯಾಲ್ಯೂಸ್, ಆಬ್ಜೆಕ್ಟೀವ್ಸ್ ಹಾಗೂ ಗೋಲ್ಸ್ ಏನೆಂಬುದು ಸ್ಪಷ್ಟ ಕಲ್ಪನೆ ಇರಬೇಕು. ಯುಜಿಸಿ ನಿಯಮಾವಳಿ ಪ್ರಕಾರ ನೂತನ ವಿಶ್ವವಿದ್ಯಾಲಯ ಸ್ಥಾಪನೆಗೆ 100 ಎಕರೆ ಜಾಗವಿರಬೇಕು. ಯುಜಿಸಿ ನಿಯಮಾವಳಿ ಪ್ರಕಾರ 5 ಸ್ನಾತಕ 5 ಸ್ನಾತಕೋತ್ತರ ಕೋರ್ಸ್ ಗಳು ಇದ್ದಲ್ಲಿ ಮೊದಲ ವರ್ಷ ಕನಿಷ್ಠ 450 ಮಂದಿ ದಾಖಲಾತಿ ಆಗುವಷ್ಟು ಮಟ್ಟಿಗಿರಬೇಕು. ಸುಮಾರು 25 ಕೋರ್ಸ್ ಗಳು ಇದ್ದಲ್ಲಿ ಕನಿಷ್ಠ ಪಕ್ಷ 3500 ರಿಂದ 4000 ವಿದ್ಯಾರ್ಥಿಗಳಿರಬೇಕು. ಪ್ರತಿ ಡಿಪಾರ್ಟ್ ಮೆಂಟ್ ಗೆ ಪ್ರೊಫೆಸರ್ ,ಇಬ್ಬರು ಅಸೋಸಿಯೇಟ್ ಪ್ರೊಫೆಸರ್ ,ನಾಲ್ವರು ಅಸಿಸ್ಟೆಂಟ್ ಪ್ರೊಫೆಸರ್ ಇರಬೇಕು ಎಂದು ಹೆಚ್.ಎ ವೆಂಕಟೇಶ್ ತಿಳಿಸಿದರು.

ಆದರೆ ಬಿಜೆಪಿಯವರು ವಿವಿ ಸ್ಥಾಪಿಸಲು ಯಾವುದೇ ರೀತಿಯ ಡಿಪಿಆರ್ ಮಾಡಿಸಿಲ್ಲ. ಚುನಾವಣೆ ಮುಂದಿಟ್ಟುಕೊಂಡು ವಿವಿಗಳನ್ನು ರಚಿಸಿದ್ದಾರೆ. ಆ ತುರ್ತು ಅವಶ್ಯಕತೆ ಏನಿತ್ತು ವಿವಿಗಳ ಸ್ಥಾಪನೆ ವೇಳೆ ಯುಜಿಸಿ ನಿಯಮಾವಳಿ ಪಾಲಿಸಿಲ್ಲ, ಈ ನಿರ್ಧಾರದಿಂದಾಗಿ ಖಾಸಗಿ ವಿವಿಗಳಿಗೆ, ಖಾಸಗಿ ಪದವಿ ಕಾಲೇಜುಗಳಿಗೆ ಉತ್ತೇಜಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಒಂದು ವಿವಿ ಮಾಡುವಾಗ ಸರ್ಕಾರ ವಿಶೇಷ ಅಧಿಕಾರಿಯನ್ನು ನೇಮಕ ಮಾಡಬೇಕು. ಅದು ಮಾಡಿಲ್ಲ ವಿವಿಗಳ ರಚನೆಗೆ ಸ್ಥಳ ಹಾಲಿ ಇರುವ ವಿಶ್ವವಿದ್ಯಾಲಯಗಳ ಅಂತರ ಇವೆಲ್ಲದರ ಬಗ್ಗೆ ಗಮನಹರಿಸಬೇಕು. ಉದಾಹರಣೆ ಮೈಸೂರು ವಿವಿಗೆ ಒಂದು ಇತಿಹಾಸವಿದೆ. ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದೆ. ಕೇವಲ 35 ರಿಂದ 40 ಕಿಲೋ ಮೀಟರ್‌ಗಳ ದೂರಕ್ಕೆ ಮಂಡ್ಯ ಚಾಮರಾಜನಗರ ಹಾಸನ ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆಯೇ ಎಂಬುದನ್ನು ನೋಡಬೇಕಿದೆ. ಹಾವೇರಿ, ಕೊಪ್ಪಳ ಬೀದರ್, ಬಾಗಲಕೋಟೆ, ಕೊಡಗು ಮಹಿಳಾ ಕ್ಲಸ್ಟರ್ ಹಾಗೂ ನೃಪತುಂಗ ಇವು ಕೂಡ ಇದಕ್ಕೆ ಹೊರತಾಗಿಲ್ಲ ಎಂದು ಟೀಕಿಸಿದರು.

ಮುಕ್ತ ಅವಕಾಶ ಮಂಡ್ಯ, ಚಾಮರಾಜನಗರ ಹಾಸನ ವಿವಿಗಳನ್ನ ಮುಚ್ಚುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಮುಕ್ತವಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿಕೊಳ್ಳಬಹುದು. ಆದರೆ ಈಗ ಅಲ್ಲಿಯೂ ವಿವಿ ಇರುವುದರಿಂದ ಹೊರ ವಿಶ್ವ ವಿದ್ಯಾಲಯಗಳಲ್ಲಿ ಓದಲು ಎರಡೇ ಸೀಟುಗಳಿರುತ್ತವೆ. ಹೀಗಾಗಿ ಪ್ರತಿಷ್ಠಿತ ಮೈಸೂರು ವಿವಿಯಲ್ಲಿ ಓದಬೇಕೆನ್ನುವ ಆಕಾಂಕ್ಷೆ ಹೊಂದಿರುವ ವಿದ್ಯಾರ್ಥಿಗಳು ಇದರಿಂದ ಅವಕಾಶ ವಂಚಿತರಾಗುತ್ತಾರೆ. ಹೀಗಾಗಿ ಅಲ್ಲಿನ ವಿವಿಗಳನ್ನ ಮುಚ್ಚಿ ಮೈಸೂರಿಗೆ ಸೇರಿಸುವುದರಿಂದ ಅಲ್ಲಿನ ವಿದ್ಯಾರ್ಥಿಗಳೂ ಸಹ ಪ್ರತಿಷ್ಠಿತ ಮೈಸೂರು ವಿವಿಯಲ್ಲಿ ವ್ಯಾಸಂಗ ಮಾಡಬಹುದು ಎಂದು ಹೆಚ್.ಎ ವೆಂಕಟೇಶ್ ತಿಳಿಸಿದರು.

ವಿಶ್ವವಿದ್ಯಾಲಯಗಳನ್ನು ಮಾಡಲಿಕ್ಕೆ ಇವರು ಹೊರಡಿಸಿರುವ ಆದೇಶದ ಪ್ರತಿಯನ್ನು ನೋಡಿದರೆ ಇವರ ಉದ್ದೇಶ ಶಾಲೆ ಮಾಡುವುದಿತ್ತೋ ಹೊರತು ವಿಶ್ವವಿದ್ಯಾಲಯ ಮಾಡುವ ಕಲ್ಪನೆಯ ಇವರಿಗೆ ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಾಗಾದರೆ ಇವರ ಉದ್ದೇಶವೇನು, ಹಳೇ ಮೈಸೂರು ಪಾರಂಪಾರಿಕ ವಿವಿಯನ್ನು ನಿರ್ನಾಮ ಮಾಡುವುದು, ಈ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಪ್ರಗತಿಯನ್ನು ಕುಂಠಿತಗೊಳಿಸುವುದು. ಹಾಗೆಯೇ ಉಳಿದ ವಿಶ್ವವಿದ್ಯಾಲಯಗಳಿಗೂ ಇದು ಅನ್ವಯಿಸುತ್ತದೆ ಎಂದು ಹೆಚ್.ಎ ವೆಂಕಟೇಶ್ ಕಿಡಿಕಾರಿದರು.

ರಾಜ್ಯದಲ್ಲಿ 32 ಸರ್ಕಾರಿ ವಿಶ್ವವಿದ್ಯಾಲಯಗಳಿವೆ.15 ಡೀಮ್ಡ್ ವಿಶ್ವವಿದ್ಯಾಲಯಗಳಿವೆ. 29 ಖಾಸಗಿ ವಿಶ್ವವಿದ್ಯಾಲಯಗಳಿವೆ ಏಳು ಸೆಂಟ್ರಲ್ ವಿಶ್ವವಿದ್ಯಾಲಯಗಳಿವೆ. ಇವೆಲ್ಲವನ್ನೂ ನೋಡಿದರೆ ಸರ್ಕಾರದ ವಿಶ್ವವಿದ್ಯಾಲಯಗಳ ಸಂಖ್ಯೆ ಕೇವಲ 30%. ಬಿಜೆಪಿ ಆಡಳಿತ ಅವಧಿಯಲ್ಲಿ 17 ವಿಶ್ವವಿದ್ಯಾನಿಲಯಗಳಿಗೆ ಅನುಮತಿ ನೀಡಲಾಗಿದೆ. ಸಂಗೀತ, ಜನಪದ, ಸಂಸ್ಕೃತ ಇವುಗಳಿಗೆಲ್ಲ ಒಂದೊಂದು ವಿಶ್ವವಿದ್ಯಾನಿಲಯಗಳನ್ನು ಮಾಡಿದ ಖ್ಯಾತಿಯು ಇವರಿಗೆ ಸಲ್ಲಬೇಕು. ಆದರೆ ಇವುಗಳನ್ನು ಉತ್ತೇಜಿಸುವ ಬಗ್ಗೆ ಯಾವುದೇ ನಿರ್ಧಾರಗಳನ್ನು ದೂರದೃಷ್ಟಿಯನ್ನು ಬಿಜೆಪಿ ಸರ್ಕಾರ ಹೊಂದಿರಲಿಲ್ಲ ಎಂಬುದು ಅವುಗಳ ಇಂದಿನ ಸ್ಥಿತಿಯಿಂದ ಗೊತ್ತಾಗುತ್ತದೆ. ವಿಶ್ವವಿದ್ಯಾಲಯಗಳು ಶೈಕ್ಷಣಿಕ ಪ್ರಗತಿಯ ಸಂಶೋಧನೆಯ ಧ್ಯಾನದ ಕೇಂದ್ರಗಳು. ವಿಸಿ, ರಿಜಿಸ್ಟರ್ ಮಾಡುವ ಕೇಂದ್ರಗಳಲ್ಲ . ವಿಸಿ ನೇಮಕಗಳಿಗಾಗಿಯೇ ವಿಶ್ವವಿದ್ಯಾಲಯ ರಚಿಸುವುದು ಯಾವ ಮಾನದಂಡ ಎಂದು ಹೆಚ್.ಎ ವೆಂಕಟೇಶ್ ಪ್ರಶ್ನಿಸಿದರು.

# ಸ್ವಯಂ ಉದ್ಯೋಗದಿಂದ ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಿ

**ಕೆ.ಆರ್.ಪೇಟೆ:** ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ಕರೆ ನೀಡಿದರು.

ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಹಾಗೂ ಜ್ಞಾನ ಭಾರತಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಮುರುಕನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ತಾಲೂಕಿನ ಶೀಳನೆರೆ ಹೋಬಳಿಯ ಮುರುಕನಹಳ್ಳಿ ಗ್ರಾಮದಲ್ಲಿ ಶಾಸಕ ಹೆಚ್.ಟಿ.ಮಂಜು ಅವರು ಮಹಾಸಭೆ ಹಾಗೂ ಹೊಲಿಗೆ ತರಬೇತಿ ಕೇಂದ್ರ ಉದ್ಘಾಟಿಸಿ, ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲದ ಚೆಕ್ಕುಗಳನ್ನು ವಿತರಣೆ ಮಾಡಿ ಮಾತನಾಡಿದರು.



ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕು. ಗ್ರಾಮ ಪಂಚಾಯಿತಿ ಹಾಗೂ ಸರ್ಕಾರದಿಂದ ನೀಡಲಾಗುವ ಸಾಲದ ಮೊತ್ತವನ್ನು ಸ್ವಯಂ ಉದ್ಯೋಗ ಕೈಗೊಳ್ಳಲು ಬಳಕೆ ಮಾಡಬೇಕು. ಪ್ರಮುಖವಾಗಿ ಗುಡಿ ಕೈಗಾರಿಕೆಗಳಾದ ಮೇಣದ ಬತ್ತಿ ತಯಾರಿಕೆ, ಗಂದದ ಕಡ್ಡಿ ತಯಾರಿಕೆ, ಊಟದ ಎಲೆ, ಊಟದ ಪ್ಲೇಟ್ ತಯಾರಿಕೆ, ಫೆನಾಯಿಲ್, ಬ್ಲೀಚಿಂಗ್ ಪೌಡರ್ ತಯಾರಿಕೆಯಂತಹ ಸಣ್ಣ ಉದ್ಯಮವನ್ನು ಸ್ಥಾಪನೆ ಮಾಡಿ ಕಡಿಮೆ ಬಂಡವಾಳದಿಂದ ಹೆಚ್ಚು ಲಾಭ ಗಳಿಸಬಹುದು. ಇದರಿಂದ ಹೆಚ್ಚು ಹೆಚ್ಚು ಲಾಭಗಳಿಸಿ ಮಹಿಳೆಯರು ಆರ್ಥಿಕ ಸಬಲೀಕರಣ ಸಾಧಿಸಬೇಕು ಎಂದು ಸಲಹೆ ನೀಡಿದರು. ಇಂದು ಬರೋಡ ಬ್ಯಾಂಕ್ ಕಳೆದ 25ವರ್ಷಗಳಿಂದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗಕ್ಕೆ ಅಗತ್ಯವಿರುವ ಕೌಶಲ್ಯ ತರಬೇತಿ ನೀಡುತ್ತಿದೆ. 18ರಿಂದ 45ವರ್ಷ ಒಳಪಟ್ಟ ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು. ತರಬೇತಿಯ ನಂತರ ಬರೋಡ ಬ್ಯಾಂಕಿನಿಂದಲೇ ಸಬ್ಸಿಡಿ ರೂಪದಲ್ಲಿ ಸಾಲವನ್ನು ನೀಡಲಾಗುತ್ತದೆ ಹಾಗಾಗಿ ಆಸಕ್ತ ನಿರುದ್ಯೋಗಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಶಾಸಕರು ಸಲಹೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್.ಶೇಖರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕರ ಧರ್ಮಪತ್ನಿ ರಮಾಮಂಜು ಮಹಿಳಾ ಸಂಘಗಳಿಗೆ ಸಾಲದ ಚೆಕ್ಕುಗಳನ್ನು ವಿತರಣೆ ಮಾಡಿದರು. ಬರೋಡಾ ಬ್ಯಾಂಕಿನ ವೆಬ್‌ಸಿಟಿ ಸಂಸ್ಥೆಯ ಪ್ರಸನ್ನಕುಮಾರ್, ರವಿ, ತಾಲೂಕು ಆರ್ಥಿಕ ಸಾಕ್ಷರತಾ ಅಧಿಕಾರಿ ಪ್ರಮೋದ್ ತರಬೇತಿ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಸಕರ ಧರ್ಮಪತ್ನಿ ರಮಾ ಮಂಜು, ಗ್ರಾ.ಪಂ.ಉಪಾಧ್ಯಕ್ಷ ಪುನೀತ್‌ಕುಮಾರ್, ಪಿಡಿಓ ಮುಜಾಕಿರ್, ಒಕ್ಕೂಟದ ಅಧ್ಯಕ್ಷೆ ಪೂರ್ಣಿಮಆನಂದ್, ಗ್ರಾಪಂ ಸದಸ್ಯರಾದ ಜಗದೀಶ್, ದೇವರಾಜು, ಹೆಚ್.ಟಿ.ಜಗದೀಶ್, ಧನಂಜಯ, ಕುಮಾರಸ್ವಾಮಿ, ಪೂರ್ಣಿಮಾ, ರತ್ನಮ್ಮ, ಲಲಿತಾ, ಪುಷ್ಪ, ನಂದಿನಿ, ಲೀಲಾವತಿ, ಶೋಭ, ತಾಲ್ಲೂಕು ಸಂಜೀವಿನಿ ಯೋಜನೆಯ ಮಹಿಳಾ ಒಕ್ಕೂಟದ ಮೇಲ್ವಿಚಾರಕ ನಂಜುಂಡಯ್ಯ, ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಒಕ್ಕೂಟದ ಅಧ್ಯಕ್ಷೆ ಪೂರ್ಣಿಮಾ, ಉಪಾಧ್ಯಕ್ಷೆ ಬೇಬಿ, ಕಾರ್ಯದರ್ಶಿ ಕುಮಾರಿ, ಸಹ ಕಾರ್ಯದರ್ಶಿ ಗುಲ್ನಾಜ್ ಭಾನು, ಖಜಾಂಚಿ ಗಂಗಮ್ಮ ಹಾಗೂ ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು ಸೇರಿದಂತೆ ನೂರಾರು ಮಂದಿ ಸಾರ್ವಜನಿಕರು ಭಾಗವಹಿಸಿದ್ದರು.

# ಪಕ್ಷಿಗಳ ಗಣತಿ: ಸರಕಾರಕ್ಕೆ ವರದಿ



**ಶಿಡ್ಲಘಟ್ಟ:** ಪರಿಸರ ಸಮತೋಲನದಲ್ಲಿ ಮುಖ್ಯ ಪಾತ್ರವಹಿಸುವ ಪಕ್ಷಿಗಳ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಯಾವ ಪಕ್ಷಿ ಸಂತತಿ ಹೆಚ್ಚಿದೆ. ಯಾವ ಪಕ್ಷಿ ಸಂತತಿ ಕ್ಷೀಣಿಸಿದೆ ಎಂಬಿತ್ಯಾದಿ ಮಾಹಿತಿಯನ್ನು ಸಂಗ್ರಹಿಸಿ ಸಂಬಂಧಿಸಿದ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗುವುದು ಮತ್ತು ಸರಕಾರಕ್ಕೆ ವರದಿಯನ್ನು ನೀಡಲಾಗುತ್ತದೆ ಎಂದು ಪ್ರಾದೇಶಿಕ ಅರಣ್ಯ ವಲಯದ ವಲಯ ಅರಣ್ಯ ಅಧಿಕಾರಿ ರಾಜೇಶ್ ಗವಾಲ್ ತಿಳಿಸಿದ್ದಾರೆ.

ನಗರದ ಹೊರವಲಯದ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಪರಿಸರ ಭದ್ರತಾ ಪ್ರತಿಷ್ಠಾನ ಸಂಸ್ಥೆ ಹಾಗು ಅರಣ್ಯ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪಕ್ಷಿಗಳ ಗಣತಿ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇದರಿಂದ ಪಕ್ಷಿ ಸಂಕುಲವನ್ನು ಉಳಿಸಲು ಕ್ರಮಗಳನ್ನು ಕೈಗೊಳ್ಳಲು ಮತ್ತು ಯೋಜನೆಗಳನ್ನು ರೂಪಿಸಲು ನೆರವಾಗಲಿದೆ. ಜಗತ್ತಿನಲ್ಲಿ 11,500 ವಿವಿಧ ಜಾತಿಯ ಪಕ್ಷಿಗಳು ಇದೆ. 1200 ರಿಂದ 1300 ಜಾತಿಯ ಪಕ್ಷಿಗಳು ಕಂಡುಬರುತ್ತದೆ. ನಮ್ಮ ಶಿಡ್ಲಘಟ್ಟ ತಾಲೂಕಿನಲ್ಲಿ 150 ರಿಂದ 250 ವಿವಿಧ ಜಾತಿಯ ಪಕ್ಷಿಗಳನ್ನು ಕಾಣಬಹುದಾಗಿದೆ ಎಂದು ಹೇಳಿದರು.

ನಾವು ಇಂದು ಆರೋಗ್ಯಯುತ ಬದುಕನ್ನು ನಡೆಸುತ್ತಿದ್ದೇವೆ ಎಂದರೆ ಅದಕ್ಕೆ ಈ ಪ್ರಕೃತಿಯಲ್ಲಿನ ಎಲ್ಲಾ ಕ್ರಿಮಿ, ಕೀಟ, ಪಕ್ಷಿ ಹಾಗು ಪ್ರಾಣಿಗಳನ್ನು ಒಳಗೊಂಡ ಪರಿಸರ ಕಾರಣ ಎಂದರು.

ವಿಶ್ವದಾದ್ಯಂತ ಫೆ. 14 ರಿಂದ 17 ರವರೆಗೆ 4 ದಿನಗಳ ಕಾಲ ಗ್ರೇಟ್ ಬ್ಯಾಕ್ ಯಾರ್ಡ್ ಬರ್ಡ್ ಕೌಂಟಿಂಗ್, ನಮ್ಮ ಸುತ್ತ ಮುತ್ತಲಿನ ಪಕ್ಷಿಗಳ ಗಣತಿ ನಡೆಯುತ್ತದೆ ಎಂದರು.

ಪರಿಸರ ಭದ್ರತಾ ಪ್ರತಿಷ್ಠಾನ ಸಂಸ್ಥೆ(ಎಫ್‌ಇಎಸ್ ಸಂಸ್ಥೆ)ಯ ಉಪಯೋಜನಾಧಿಕಾರಿ ಎಸ್.ಜಿ.ಗೋಪಿ ಮಾತನಾಡಿ, ಅನಗತ್ಯ ಮತ್ತು ಅಗತ್ಯಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುವುದರಿಂದಲೂ ಪರಿಸರ ಹಾಳಾಗುತ್ತಿದೆ ಪಕ್ಷಿ ಸಂತತಿ ಕ್ಷೀಣಿಸುತ್ತಿದೆ, ರಾಜ ಕಾಲುವೆ, ಪೋಷಕ ಕಾಲುವೆಗಳನ್ನು ಒತ್ತುವರಿ ಮಾಡಿ ಕೆರೆ ಕುಂಟೆ ಮತ್ತು ಜಲಾಶಯಗಳಿಗೆ ನೀರು ಹೋಗದಂತೆ ಮಾಡಿರುವುದು ಕೂಡ ಅಲ್ಲಿ ಪಕ್ಷಿಗಳು ವಾಸಿಸದಂತಾಗಿ ಪಕ್ಷಿಗಳು ಸಾವನ್ನಪ್ಪುತ್ತಿವೆ ಎಂದು ಹೇಳಿದರು.

ಮಾನವನಿಂದ ಪರಿಸರದ ಮೇಲಿನ ದಬ್ಬಾಳಿಕೆ, ಅತಿಕ್ರಮಣ,ಅತಿಯಾದ ರಸಗೊಬ್ಬರಗಳ ಬಳಕೆ, ಕ್ರಿಮಿ ನಾಶಕಗಳ ಬಳಕೆಯಿಂದ ಪಕ್ಷಿ ಸಂಕುಲ ಕ್ಷೀಣಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮ ಸುತ್ತ ಮುತ್ತಲಿನ ಪರಿಸರ ಸಮತೋಲನಕ್ಕೆ ಹಾಗೂ ನಮ್ಮ ಜೀವನ ಅಡಗಿರುವ ಕೃಷಿಗೆ ಮೂಲಾಧಾರವಾದ ಪಕ್ಷಿ ಪ್ರಾಣಿ ಸಂತತಿಯನ್ನು ಉಳಿಸಲು ನಾವೆಲ್ಲರೂ ಒಗ್ಗಟ್ಟಾಗಬೇಕು, ಸ್ಥಳೀಯ ಸಂಸ್ಥೆಗಳು ಸೇರಿ ಎಲ್ಲಾ ಸಂಘ ಸಂಸ್ಥೆ, ಶಾಲಾ ಕಾಲೇಜು ವಿದ್ಯಾರ್ಥಿಗಳು, ಯುವಜನರು ಪ್ರಾಣಿ, ಪಕ್ಷಿ, ಪರಿಸರ ಸಂರಕ್ಷಣೆ ಮುಂದಮಾಗಬೇಕೆಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪ ವಲಯ ಅರಣ್ಯ ಅಧಿಕಾರಿ ಜಯಚಂದ್ರ,ಅರಣ್ಯ ಇಲಾಖೆಯ ಲೋಕೇಶ್,ನವೀನ್, ಕಾಶಿನಾಥ್,ಹಾಗೂ ಎಫ್‌ಇಎಸ್ ಸಂಸ್ಥೆಯ ರಮೇಶ್ ನರೇಂದ್ರಬಾಬು ಮತ್ತು ವರದನಾಯಕನಹಳ್ಳಿ ಸರ್ಕಾರಿ ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

# ದೇವಾಲಯ-ಮಠಗಳಿಂದ ನಮ್ಮ ಸಂಸ್ಕೃತಿ-ಸಂಸ್ಕಾರ ಉಳಿಯುವಿಕೆ ಸಾಧ್ಯ



**ದೇವನಹಳ್ಳಿ:** ನಮ್ಮ ಪುರಾತನವಾದ ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸುವುದರೊಂದಿಗೆ ಭವಿಷ್ಯದ ನಮ್ಮ ಯುವ ಜನಾಂಗದಲ್ಲಿ ಸಂಸ್ಕೃತಿ, ಸಂಸ್ಕಾರಗಳು ಬೆಳೆಯುವಂತೆ ಮಾಡಲು ಸಾಧ್ಯವಾಗುತ್ತದೆ ಎಂದು ಪುರಸಭಾ ಮಾಜಿಅಧ್ಯಕ್ಷ ಎಂ.ಸತೀಶ್‌ಕುಮಾರ್ ತಿಳಿಸಿದರು.

ಅವರು ಮಂಗಳವಾರ ನಗರ್ತಯುವಕ ಸಂಘದ ವತಿಯಿಂದ ಹಾಗೂ ನವಗ್ರಹಗಳ ದೇವಾಲಯದ ಜೀರ್ಣೋದ್ಧಾರ ಸಮಿತಿಯಿಂದ ಪಟ್ಟಣದ ಗಾಂಧಿಚೌಕದ ಬಳಿ ಇರುವ 1960ರಲ್ಲಿ ಕೀರ್ತಿ ಶೇಷ ಕೆ ಸಿ ಬಸಪ್ಪರವರು ಪ್ರತಿಷ್ಠಾಪಿಸಿ, ವರನಟಡಾ. ರಾಜಕುಮಾರ್‌ರವರು ಉದ್ಘಾಟಿಸಿದ ನವಗ್ರಹಗಳ ದೇವಾಲಯದ, 15ನೇ ವರ್ಷದಜೀರ್ಣೋದ್ಧಾರಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಮಹಾಂತಿನ ಮಠದ ಕಾರ್ಯದರ್ಶಿ ವಿ ವಿಶ್ವನಾಥ್ ಮಾತನಾಡಿ 1960ರಲ್ಲಿ ಪ್ರಾರಂಭಗೊಂಡದೇವಾಲಯವನ್ನು ಚಲನಚಿತ್ರ ನಿರ್ಮಾಪಕರಾದ ಕೆ.ಸಿ ಬಸಪ್ಪರವರು ನಿರ್ಮಿಸಿದ್ದು ಡಾ.ರಾರಾಜಕುಮಾರ್‌ರವರಿಗೆಚಿತ್ರರಂಗದಅವರಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ವಿಜಯಪುರದಲ್ಲೇ ಸನ್ಮಾನ ನಡೆಸಿದ್ದೆಂದು ರಾಜಕುಮಾರ ನೆನಪಿಸಿಕೊಳ್ಳುತ್ತಿದ್ದನ್ನ ತಿಳಿಸಿ, ನಂತರ 1985 ರಲ್ಲಿ 25ನೇ ವರ್ಷದ ವಾರ್ಷಿಕೋತ್ಸವಕಾರ್ಯಕ್ರಮಕ್ಕೂಡಾ. ರಾಜಕುಮಾರ ಆಗಮಿಸಿದ್ದುದನ್ನು ನೆನಪಿಸಿಕೊಂಡರು.

ದೇವಾಲಯದಲ್ಲಿ ಬೆಳಗಿನಿಂದಲೇ ನವಗ್ರಹ ಸ್ವಾಮಿ ರವರುಗಳಿಗೆ ಪಂಚಾಮೃತಅಭಿಷೇಕದಿಂದ ಪ್ರಾರಂಭಿಸಿ ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ, ಅನ್ನ ಸಂತರ್ಪಣೆಕಾರ್ಯಕ್ರಮವನ್ನುಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಬೆಂಗಳೂರಿನ ಏಎಸ್‌ವಿಎನ್‌ವಿ ಸಂಘದಖಜಾಂಚಿ ಶಂಕರ್, ಪ್ರಗತಿ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ದೇಶಕರಾದ ಕೃಪಾ ಶಂಕರ್, ಟ್ರಸ್ಟಿಗಳಾದ ಶಾಂತಲಾ ಶಂಕರ್, ಭಾವನ, ಸುಧಾ ಸತೀಶ್, ನಗರ್ತಯುವಕ ಸಂಘದ ಅಧ್ಯಕ್ಷರಾದ ಎ.ಮಂಜುನಾಥ್, ನಾಗಣ್ಣ, ಕೆಸಿ ಬಸಪ್ಪರವರ ಕುಟುಂಬದ ನಟರಾಜ್, ಪರಮೇಶ್, ಅರ್ಚಕರಾದ ನಾಗರಾಜ್, ಮಹಾದೇವಿ, ಮಹಾಂತಿನ ಮಠದ ನಿರ್ದೇಶಕರುಗಳು, ಮಾಜಿ ನಿರ್ದೇಶಕರುಗಳು,ಮತ್ತಿತರುಗಳು ಭಾಗವಹಿಸಿದ್ದರು.

# ಗ್ರಾಮಾಡಳಿತ ಅಧಿಕಾರಿಗಳ ಧರಣಿ: ಮುನಿರಾಜು ಭೇಟಿ

**ಶಿಡ್ಲಘಟ್ಟ:** ಗ್ರಾಮ ಆಡಳಿತ ಅಧಿಕಾರಿಗಳಿಗೆ ವಾರ್ಷಿಕ ವೇತನ ಭತ್ಯೆಯನ್ನು ಹಾಗು ಅಂತರ್ ಜಿಲ್ಲೆ ವರ್ಗಾವಣೆ ನೀಡಬೇಕು, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಮುನಿರಾಜು (ಕುಟ್ಟಿ) ಧರಣಿ ಸ್ಥಳಕ್ಕೆ ತೆರಳಿ ಬೆಂಬಲವನ್ನು ನೀಡಿ ತಿಳಿಸಿದರು.

ನಗರದ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ನಡೆಸುತ್ತಿರುವ ಎರಡನೇ ಹಂತದ ಮುಷ್ಕರಕ್ಕೆ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಬೆಂಬಲವನ್ನು ನೀಡಿ ಅವರು ಮಾತನಾಡಿದರು.

ಗ್ರಾಮ ಲೆಕ್ಕಾಧಿಕಾರಿಗಳಿಗೆ ಪ್ರತ್ಯೇಕ ಕಚೇರಿಗಳನ್ನು ನೀಡಬೇಕು, ಲ್ಯಾಪ್ ಟಾಪ್, ಪ್ರಿಂಟರ್‌ಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷ ವಿಸ್ಟಂ ನಾಗರಾಜ್ ಮಾತನಾಡಿ ,ಸರ್ಕಾರ ಧರಣಿನಿತರ ಬೇಡಿಕೆಗಳಿಗೆ ಶೀಘ್ರವಾಗಿ ಸ್ಪಂದಿಸಬೇಕು ವಿಳಂಬ ಮಾಡಿದ್ದಲ್ಲಿ ಮುಂದಿನ ದಿನಗಳಲ್ಲಿ ಅವರ ಪರವಾಗಿ ಉಗ್ರವಾದ ಹೋರಾಟ ನಡೆಸಲಾಗುವುದು ಎಂದರು.

ಈ ವೇಳೆ ಗ್ರಾಮ ಆಡಳಿತ ಸಂಘದ ತ್ರಿಮೂರ್ತಿ ಹಾಗು ಪದಾಧಿಕಾರಿಗಳು ಧರಣಿಯನ್ನು ಮುಂದುರಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಉಪಾಧ್ಯಕ್ಷ ಆಸೀಫ್,ಸಂಘಟನಾ ಕಾರ್ಯದರ್ಶಿ ದೇವು,ಮಹಿಳಾ ಘಟಕ ಅಧ್ಯಕ್ಷೆ ಮಧುಲತಾ,ಉಪಾಧ್ಯಕ್ಷೆ ಲಕ್ಷ್ಮಿ ಶಾರದಮ್ಮ,ಯುವ ಘಟಕ ಅಧ್ಯಕ್ಷ ನಂದತೇಜ,ನಗರ ಘಟಕ ಉಪಾಧ್ಯಕ್ಷ ಸಾಧಿಕ್,ವರದರಾಜ್, ಶ್ರೀರಾಮ್, ಕೆ.ಅರುಣ್ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.



# ಸಾಲೂಗಿಡ ನೆಡುವ ಕಾರ್ಯಕ್ಕೆ ಸಾಲೂರು ಶ್ರೀ ಚಾಲನೆ

**ಹನೂರು:** ಮಲೆ ಮಹದೇಶ್ವರ ಬೆಟ್ಟದಲ್ಲಿ ಈಶ್ವರಿ ಸೋಷಿಯಲ್ ಟ್ರಸ್ಟ್ (ರಿ.) ಸಂಸ್ಥೆ ಹಮ್ಮಿಕೊಂಡಿದ್ದ ವನಮಹೋತ್ಸವ -2025 ಕಾರ್ಯಕ್ರಮದಲ್ಲಿ ಮಲೆಮಹದೇಶ್ವರ ಬೆಟ್ಟದ ಮುಖ್ಯರಸ್ತೆ ಬದಿಯಲ್ಲಿ 100 ಸಾಲುಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಸಾಲೂರು ಬೃಹನ್ಮಠಾಧ್ಯಕ್ಷರು ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಯವರು ಗಿಡ ನೆಟ್ಟು ನೀರೆರೆದು ಚಾಲನೆ ನೀಡಿದರು.

ನಂತರ ಸಾಲೂರು ಬೃಹನ್ಮಠಾಧ್ಯಕ್ಷರು ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಅವರು ಮಾತನಾಡಿ, ಮಲೆಮಹದೇಶ್ವರ ಸ್ವಾಮಿ ಬೆಟ್ಟಕ್ಕೆ ಬರುವಂತಹ ಭಕ್ತರಿಗೆ ಅನುಕೂಲವಾಗಲೆಂದು ಸಾಲುಮರದ ವೆಂಕಟೇಶ್ ರವರು ಹಮ್ಮಿಕೊಂಡಿರುವ ಪರಿಸರ ಕಾಯಕ ಮೆಚ್ಚುವಂತ್ತದ್ದು ಹಾಗೂ ಅವರ ಸಂಕಲ್ಪ ಈಡೇರಿ ಅವರು ನೆಟ್ಟಿರುವ ಗಿಡಗಳು ಮರಗಳಾಗಿ ಬೆಳೆದು ಶ್ರೀ ಕ್ಷೇತ್ರವು ಹಚ್ಚ ಹಸಿರಿನಿಂದ ಕಂಗೊಳಿಸಲಿ ಎಂದು ಆಶಿಸಿದರು.

ಈಶ್ವರಿ ಸೋಷಿಯಲ್ ಟ್ರಸ್ಟ್ ಸಂಸ್ಥಾಪಕರಾದ ಸಿ.ಎಂ.ವೆಂಕಟೇಶ್ ಮಾತನಾಡಿ ಒಮ್ಮೆಗೇ ಎಲ್ಲಾ ಕಡೆ ಸಾಲು ಗಿಡಗಳನ್ನು ನೆಟ್ಟು ಪೋಷಣೆ ಮಾಡುವುದು ಕಷ್ಟಸಾಧ್ಯ ಆದ್ದರಿಂದ ಆಗಾಗ್ಗೆ ಸಾಲು ಗಿಡಗಳನ್ನು ನೆಟ್ಟು ಪೋಷಣೆ ಉತ್ತಮ. ಈ ಹಿಂದೆ ಶ್ರೀ ಮಲೆಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ನಮ್ಮ ಟ್ರಸ್ಟ್ ವತಿಯಿಂದ 300 ಸಾಲು ಗಿಡಗಳನ್ನು ನೆಟ್ಟು ಬೆಳೆಸಲಾಗುತ್ತಿದೆ.

ಪ್ರಸ್ತುತ 100 ಸಾಲು ಗಿಡಗಳನ್ನು ನೆಟ್ಟು ಪೋಷಣೆ ಮಾಡುವ ಕೆಲಸಕ್ಕೆ ಕೈ ಹಾಕಲಾಗಿದೆ ಎಂದು ತಿಳಿಸಿದರು.

ಮಲೆ ಮಹದೇಶ್ವರ ಸ್ವಾಮಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ. ಇ. ರಘು ಮಾತನಾಡಿ, ಕ್ಷೇತ್ರ ಮಲೆಮಹದೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಹೆಚ್ಚು ಹೆಚ್ಚು ಸಾಲು ಗಿಡಗಳನ್ನು ನೆಡುವುದರಿಂದ ಅದು ಬೆಳೆದು ಬರುವ ಭಕ್ತಾದಿಗಳಿಗೆ ನೆರಳನ್ನು ನೀಡುವಂತಾಗುತ್ತದೆ. ಪರಿಸರ ಪ್ರೇಮಿ ವೆಂಕಟೇಶ್ ರವರು ಎರಡನೇ ಬಾರಿಗೆ ಸಾಲು ಗಿಡಗಳನ್ನು ನೆಡುವ ಮುಖಾಂತರ ಶ್ರೀ ಕ್ಷೇತ್ರವನ್ನು ಇನ್ನಷ್ಟು ಹಸಿರಾಗಿಸಲು ಮುಂದಾಗಿರುವುದು ಶ್ಲಾಘನೀಯ ಎಂದರು.

ಪರಿಸರ ಕಾಳಜಿ ಹೊತ್ತು ಸಾಲು ಗಿಡಗಳನ್ನು ಪೋಷಣೆ ಮಾಡುತ್ತಿರುವ ವೆಂಕಟೇಶ್ ರವರಿಗೆ ಪ್ರಾಧಿಕಾರದ ವತಿಯಿಂದ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ಉಪಕಾರ್ಯದರ್ಶಿ ಚಂದ್ರಶೇಖರ್, ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತರು ಸ್ವಾಮಿ ಪೊನ್ನಾಚಿ, ರವಿಕುಮಾರ್, ಎ. ಸುಬ್ರಹ್ಮಣ್ಯಂ ಸೇರಿದಂತೆ ಇನ್ನಿತರರು ಇದ್ದರು.




# ಜೀವಮಾನದುದ್ದಕ್ಕೂ ಬ್ರಹ್ಮಚರ್ಯ ಪಾಲನೆ ಮಾಡಿದ ಸೇವಾಲಾಲ್

**ಚೇಳೂರು:** ಭರತ ಖಂಡದ ಧಾರ್ಮಿಕ ರಾಯಭಾರಿ ಎಂದೇ ಹೆಸರಾದ ಸಂತ ಸೇವಾಲಾಲ್ ಮಹಾರಾಜರು ಹಲವು ಪವಾಡಗಳ ಮೂಲಕ ಜನರ ಮನ ಗೆದ್ದವರು. ತಮ್ಮ ಲೀಲೆಗಳನ್ನು ಪ್ರದರ್ಶನ ಮಾಡುತ್ತಾ, ಜನದಂಬೆಯ ಆರಾಧಕರಾಗಿ ಇಡೀ ಜೀವಮಾನದುದ್ದಕ್ಕೂ ಬ್ರಹ್ಮಚರ್ಯವನ್ನೇ ಪಾಲನೆ ಮಾಡಿದ ಸಂತ ಸೇವಾಲಾಲರು, ಇಂದಿಗೂ ಜನ ಮಾನಸದಲ್ಲಿ ಗುರುವಿನ ಸ್ಥಾನವನ್ನು ಪಡೆದಿದ್ದಾರೆ ಚಿತ್ರದುರ್ಗ ಬಂಜಾರ ಪೀಠದ ದರ್ಮ ಗುರು.ಸರ್ಧಾರ್ ಸೇವಾಲಾಲ್ ಸ್ವಾಮೀಜಿ, ಎಂದರು.



ಅವರು ಚೇಳೂರು ತಾಲ್ಲೂಕು ಬಂಜಾರ ಲಂಬಾಣಿ ಸಂಘದ ವತಿಯಿಂದ ಚೇಳೂರು ಪಟ್ಟಣದ ಹೆಚ್.ವಿ.ಎನ್. ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ ಸಂತ ಸೇವಾಲಾಲ್ ಜಯಂತಿಯನ್ನು ಉದ್ದೇಶಿಸಿ ಉದ್ಘಾಟಿಸಿ ಮಾತನಾಡಿದ ಅವರು ಜನತೆಗೆ ವ್ಯಸನ ಮುಕ್ತರಾಗಿ ಎಂದು ಬೋಧಿಸಿದ ಸೇವಾಲಾಲರು ಸತ್ಯ, ಅಹಿಂಸೆ, ತ್ಯಾಗ ಮನೋಭಾವದ ನೀತಿಮಾತು ಹೇಳಿದ್ದರು. ಈ ನಮ್ಮ ದೇಶದ ನೆಲ ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದ್ದು ಈ ವೈವಿಧ್ಯತಾ ಸಂಸ್ಕೃತಿಗೆ ಹಲವಾರು ಸಾಂಸ್ಕೃತಿಕ ರಾಯಭಾರಿಗಳು ಕಾರಣೀಭೂತರು, ಭಾರತ ನೆಲದಲ್ಲಿ ಹಲವು ಸಂತರು, ಧರ್ಮ ಸುಧಾರಕರು, ತತ್ವಜ್ಞಾನಿಗಳು ಜನ್ಮ ತಾಳಿ ಜನರಲ್ಲಿನ ತಮಂಧತೆಯನ್ನು ಹೋಗಲಾಡಿಸಿದ್ದಾರೆ. ಇಂತಹ ಮಹಾನ್ ಸಂತರುಗಳಲ್ಲಿ ಲಂಬಾಣಿ ಸಮುದಾಯದ ಆರಾಧ್ಯ ದೈವ ಸದ್ಗುರು ಸಂತ ಸೇವಾಲಾಲ್ ಮಹಾರಾಜರು ಒಬ್ಬರು ಎಂದರು.

ಸಂತ ಸೇವಾಲಾಲರು ಈಗಿನ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಬೆಳಗುತ್ತಿ ಹೋಬಳಿಯ ಸೂರಗೊಂಡನ ಕೊಪ್ಪ ಎಂಬಲ್ಲಿ ಶ್ರೀ ಭೀಮ ನಾಯಕ್, ಶ್ರೀಮತಿ ಧರ್ಮಿಣಿ ಯಾಡಿ (ಮಾತೆ) ಯವರ ಮಗನಾಗಿ 15 ಫೆಬ್ರವರಿ 1739ರಲ್ಲಿ ಜನಿಸಿದರು. ಇವರು ಜನನವಾದ ಸೂರಗೊಂಡನ ಕೊಪ್ಪವನ್ನು ಭಾಯಗಢ ಎಂದು ಕರೆಯಲಾಗುತ್ತದೆ. ಸೇವಾಲಾಲರು ತಮ್ಮ ಲೀಲೆಗಳ ಹಾಗೂ ಪವಾಡಗಳ ಮೂಲಕ ಜನರ ಮನಸ್ಸಿನಲ್ಲಿ ಗುರುವಿನ ಸ್ಥಾನವನ್ನು ಪಡೆದರು.

ಅಲ್ಲದೇ ಜಗದಂಬೆಯ ಆರಾಧಕರಾಗಿ ಜೀವನದುದ್ದಕ್ಕೂ ಬ್ರಹ್ಮಚಾರಿಯಾಗಿಯೇ ಉಳಿದರು. 18ನೇ ಶತಮಾನದಲ್ಲಿ ಲಂಬಾಣಿ ಜನಾಂಗದ ಹಕ್ಕಿಗಾಗಿ ಆಗಿನ ನಿಜಾಮರು ಹಾಗೂ ಮೈಸೂರು ಅರಸರೊಂದಿಗೆ ಹೋರಾಟವನ್ನು ಮಾಡಿದಂತಹ ಮಹಾನ್ ವ್ಯಕ್ತಿ ಎಂದರು ಜಯಂತಿ ಅಂಗವಾಗಿ ಚೇಳೂರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂತ ಸೇವಾಲಾಲ್ ಪೋಟೋ ದೊಂದಿಗೆ ಮೇಳ ತಾಳಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ಸಂದರ್ಭದಲ್ಲಿ ತಾಹಸೀಲ್ದಾರ್ ಶ್ರೀನಿವಾಸಲು ನಾಯ್ಡು, ಕ್ರಾಂಗ್ರೆಸ್ ಮುಖಂಡರಾದ ಪಿ.ಆರ್.ಚಲಂ, ಉಧ್ಯಮಿ ಶಿವಾನಾಯಕ್, ಸಂಘ ಹಂಗಾಮಿ ಅಧ್ಯಕ್ಷ ರಂಗೇನಾಯಕ್, ಪ್ರಧಾನ ಭಾಷಣಕಾರರಾಗಿ ಗೋಪಿನಾಯಕ್, ನಿರ್ಧೇಶಕರು ಹಾಗೂ ಸಾಂಸ್ಕೃತಿಕ ಕಾರ್ಯದರ್ಶಿ, ಕ.ರಾ.ಸರ್ಕಾರಿ.ನೌ.ಸಂಘ, ಬಾಗೇಪಲ್ಲಿ ಶಾಖೆ. ಮುಖಂಡರಾದ ಶ್ರೀರಾಮನಾಯಕ್, ನಾನೇನಾಯಕ್, ಶಂಕರ್ ನಾಯಕ್, ವಕೀಲ ಭೀಮಾನಾಯಕ್, ಇತರರು.

# ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ

**ಶಿಡ್ಲಘಟ್ಟ:** ನಾನಾ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಗ್ರಾಮ ಆಡಳಿತ ಅಧಿಕಾರಿಗಳು ಕಳೆದ ಫೆ.10ರಿಂದ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಶಾಸಕರಾದ ಬಿ.ಎನ್.ರವಿಕುಮಾರ್ ಭೇಟಿ ನೀಡಿ ಅವರ ಅಹವಾಲನ್ನು ಸ್ವೀಕರಿಸಿ ಸರ್ಕಾರದೊಂದಿಗೆ ನಿಮ್ಮ ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.



ಸಮಾನ ಕೆಲಸಕ್ಕೆ, ಸಮಾನ ವೇತನ, ಸಮಾನ ಶೈಕ್ಷಣಿಕ ಅರ್ಹತೆಗೆ ಸಮಾನ ಪದವಿ, ಪದೋನ್ನತಿ ನೀಡುವುದು, ಒಪಿಎಸ್ ಪಿಂಚಣಿ ಯೋಜನೆ ಜಾರಿ ಮಾಡುವುದು ಸೇರಿ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಗ್ರಾಮ ಆಡಳಿತ ಅಧಿಕಾರಿಗಳು ಕಂದಾಯ ಇಲಾಖೆಯ ತಮ್ಮ ಕಾರ್ಯ ನಿರ್ವಹಣೆಯ ತಂತ್ರಾಂಶಗಳನ್ನು ಅನ್ ಇನ್‌ಸ್ಟಾಲ್ ಮಾಡಿ ತೋಳಿಗೆ ಕಪ್ಪು ಪಟ್ಟಿ ಧರಿಸಿ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದು, ಧರಣಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕರಾದ ಬಿ.ಎನ್ ರವಿಕುಮಾರ್ ಅವರಿಗೆ ಗ್ರಾಮ ಆಡಳಿತ ಅಧಿಕಾರಿಗಳು ತಾವು ಕಾರ್ಯ ನಿರ್ವಹಿಸುವಾಗ ಎದುರಿಸುತ್ತಿರುವ ಸಮಸ್ಯೆಗಳು, ಸರ್ಕಾರದ ಕಾರ್ಯಾದೇಶದಿಂದ ಹೆಚ್ಚುತ್ತಿರುವ ಕೆಲಸ ದೊತ್ತಡ, ಇವೆಲ್ಲವುಗಳಿಂದ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಹೇಳಿಕೊಂಡು ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬಂಕ್ ಮುನಿಯಪ್ಪ, ಡಿ.ಬಿ.ವೆಂಕಟೇಶ್, ಹುಜುಗೂರು ರಾಮಣ್ಣ, ತಾದೂರು ರಘು, ಸರ್ವೆ ಇಲಾಖೆಯ ವ್ಯವಸ್ಥಾಪಕ ವಸಂತ್‌ಕುಮಾರ್, ಕಸಬಾ ಹೋಬಳಿಯ ರೆವಿನ್ಯೂ ನಿರೀಕ್ಷಕ ಪ್ರಶಾಂತ್, ಗ್ರಾಮ ಆಡಳಿತ ಸಂಘದ ತ್ರಿಮೂರ್ತಿ ಹಾಗು ಪದಾಧಿಕಾರಿಗಳು ಹಾಜರಿದ್ದರು.

# ಆನೆಗೊಳ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ

**ಕೆ.ಆರ್.ಪೇಟೆ:** ತಾಲ್ಲೂಕಿನ ಕಿಕ್ಕೇರಿ ಹೋಬಳಿಯ ಆನೆಗೊಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ ಎಲ್ಲಾ 11 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು.

ಆನೆಗೊಳ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯು ನಿಗದಿಯಾಗಿತ್ತು ಬಹುತೇಕ ಅಭ್ಯರ್ಥಿಗಳು ತಮ್ಮ ತಮ್ಮ ನಾಮಪತ್ರವನ್ನು ಸಲ್ಲಿಕೆ ಮಾಡಿದ್ರು ನಾಮಪತ್ರ ಹಿಂಪಡೆಯಲು ಇಂದು ಕೊನೆಯ ದಿನವಾಗಿದ್ದು ಜೆ.ಡಿ.ಎಸ್ ಪಕ್ಷದ ಹಿರಿಯ ನಾಯಕರಾದ ಸಿ.ಎನ್ ಪುಟ್ಟಸ್ವಾಮಿಗೌಡ್ರು ಮತ್ತು ಕಾಂಗ್ರೆಸ್ ಪಕ್ಷದ ಕೆ.ಪಿ.ಸಿ.ಸಿ ಸದಸ್ಯರಾದ ಕಿಕ್ಕೇರಿ ಸುರೇಶ್ ಒಳ ಒಪ್ಪದೊಂದಿಗೆ ಅಭ್ಯರ್ಥಿಗಳೊಂದಿಗೆ ಮಾತುಕತೆ ಮೂಲಕ ಜೆ.ಡಿ.ಎಸ್ ಪಕ್ಷ ಬೆಂಬಲಿತ ಅಭ್ಯರ್ಥಿ 7 ಸ್ಥಾನ ಮತ್ತು ಕಾಂಗ್ರೆಸ್ ಪಕ್ಷ ಬೆಂಬಲಿತ ಅಭ್ಯರ್ಥಿ 4 ಸ್ಥಾನಗಳನ್ನು ನಿಗದಿಪಡಿಸಿ ಎಲ್ಲಾ ಅಭ್ಯರ್ಥಿಗಳ ನಾಮಪತ್ರವನ್ನು ಹಿಂಪಡೆಯುವ ಮೂಲಕ ಸಹಕಾರ ಸಂಘದ ಎಲ್ಲಾ ಅಭ್ಯರ್ಥಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪರಿಶಿಷ್ಟ ಪಂಗಡಕ್ಕೆ ಮೀಸಲಿದ್ದ 1 ಸ್ಥಾನ ಖಾಲಿ ಇದ್ದು ಮುಂದಿನ ಚುನಾವಣೆಗೆ ಕಾಂಗ್ರೆಸ್ ಪಕ್ಷಕ್ಕೆ ಸೀಮಿತವಾಗಲಿದೆ. ಮುಂಬರುವ ಡಿಸಿಸಿ ಬ್ಯಾಂಕ್ ಮತ್ತು ಟಿಎಪಿಎಂಎಸ್, ಸೇರಿದಂತೆ ಮತ್ತಿತರ ಚುನಾವಣೆಗೆ ಜೆ.ಡಿ.ಎಸ್ ಪಕ್ಷದ ಅಭ್ಯರ್ಥಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ತಲಾ ಒಂದರಂತೆ ಮತದ ಹಕ್ಕನ್ನು ನೀಡಲು ಸಹ ಮಾತುಕತೆಯೊಂದಿಗೆ ತಿರ್ಮಾನಿಸಲಾಯಿತು.. ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಜಿಲ್ಲಾ ಜೆಡಿಎಸ್ ಪ್ರಧಾನಕ ಕಾರ್ಯದರ್ಶಿ ಬಿ.ಎಂ.ಕಿರಣ್ ಸೇರಿದಂತೆ ಸಾಲಗಾರರ ಕ್ಷೇತ್ರದಿಂದ ಐಕನಹಳ್ಳಿ ಉದಯಶಂಕರ್, ಲಿಂಗರಾಜು, ನಂಜುಂಡೇಗೌಡ, ಮಂಜುನಾಥ್, ಲೋಕೇಶ್, ಐ ಎಂ ಮಂಜೇಗೌಡ, ತಿಮ್ಮೇಗೌಡ, ಮಂಜುಳಮ್ಮ, ಸವಿತಾ, ದೇವಮ್ಮ, ರವರು ನೂತನ ನಿರ್ದೇಶಕರಾಗಿ ಆಯ್ಕೆಯಾದ್ರು... ನೂತನವಾಗಿ ಆಯ್ಕೆಯಾದ ನಿರ್ದೇಶಕರಿಗೆ ಜೆ.ಡಿ.ಎಸ್ ಪಕ್ಷದ ಹಿರಿಯ ನಾಯಕರಾದ ಚೋಳೇನಹಳ್ಳಿ ಸಿ.ಎನ್ ಪುಟ್ಟಸ್ವಾಮಿಗೌಡ್ರು ಮತ್ತು ಅವರ ಬೆಂಬಲಿಗರು , ಕೆ.ಪಿ.ಸಿ.ಸಿ ಸದಸ್ಯ ಕಿಕ್ಕೇರಿ ಸುರೇಶ್ ಮತ್ತು ಅವರ ಬೆಂಬಲಿಗೆ ಶುಭ ಹಾರೈಸಿದ್ರು,





# ಅನುಪಮಾ ಕೈ ಹಿಡಿದ ನಟನೆ

2015ರಲ್ಲಿ ಮಲಯಾಳಂ ಚಿತ್ರರಂಗದ ಮೂಲಕ ಬಣ್ಣದ ಬದುಕು ಆರಂಭಿಸಿದ ಅವರು ಅನುಪಮಾ ಪರಮೇಶ್ವರನ್. ಅವರ ಬೇಡಿಕೆ ದಿನ ಕಳೆದಂತೆ ಹೆಚ್ಚುತ್ತಿದೆ. ಗ್ಲಾಮರ್ ಆಗಿ ಗಮನ ಸೆಳೆಯುವುದರ ಜೊತೆಗೆ ಅವರು ನಟನೆಯಿಂದಲೂ ಭೇಷ್ ಎನಿಸಿಕೊಂಡಿದ್ದಾರೆ.

2015ರಲ್ಲಿ 'ಪ್ರೇಮಂ' ಸಿನಿಮಾ ಮೂಲಕ ಬಣ್ಣದ ಬದುಕು ಆರಂಭಿಸಿದರು. ಈ ಸಿನಿಮಾ ಸೂಪರ್ ಹಿಟ್ ಆಯಿತು. ಆ ಬಳಿಕ ತಮಿಳು, ತೆಲುಗು ಕನ್ನಡ ಸಿನಿಮಾಗಳಲ್ಲೂ ನಟಿಸಿದರು. ಅವರು ದಕ್ಷಿಣದ ಬ್ಯುಸಿ ನಟಿಯರಲ್ಲಿ ಒಬ್ಬರು. ಅವರ ಜರ್ನಿ ಬಗ್ಗೆ ಇಲ್ಲಿದೆ ಮಾಹಿತಿ.

ಅನುಪಮಾ ಪರಮೇಶ್ವರನ್ ಅವರು ಹೀರೋಯಿನ್ ಆಗಿದ್ದು ಕೇವಲ 19ನೇ ವಯಸ್ಸಿಗೆ. ಮಲಯಾಳಂನ 'ಪ್ರೇಮಂ' ಅವರ ಬದುಕು ಬದಲಿಸಿತು. ಕಡಿಮೆ ಹೊತ್ತು ತೆರೆಮೇಲೆ ಕಾಣಿಸಿಕೊಂಡರೂ ಗಮನ ಸೆಳೆದರು. ಈ ಚಿತ್ರದಲ್ಲಿ ಅವರು ಮೇರಿ ಹೆಸರಿನ ಪಾತ್ರ ಮಾಡಿದ್ದರು. ಕಥಾ ನಾಯಕನ ಶಾಲಾ ಲವ್ ಸ್ಟೋರಿಯಲ್ಲಿ ಇವರು ಬರುತ್ತಾರೆ.

ಅನುಪಮಾ ಅವರು ನಟನೆಗೆ ಬರುವಾಗ ಇನ್ನೂ ಕಾಲೇಕ್ನಲ್ಲಿ ಓದುತ್ತಿದ್ದರು. ಇಂಗ್ಲಿಷನ್ಲಿ ಬ್ಯಾಚುಲರ್ ಡಿಗ್ರೀ ಪಡೆಯುತ್ತಿದ್ದರು. ಅವರು ಕೊಟ್ಟಾಯಂನ ಸಿಎಂಎಸ್ ಕಾಲೇಜ್ನಲ್ಲಿ ಓದುತ್ತಿದ್ದರು. ಈ ಸಿನಿಮಾ ಸಿಕ್ಕ ಬಳಿಕ ಅವರಿಗೆ ಸಾಕಷ್ಟು ಆಫರ್ ಬಂದಿದ್ದರಿಂದ ಕಾಲೇಜ್ನ ಅರ್ಧಕ್ಕೆ ಬಿಡಬೇಕಾಯಿತು.

ಅನುಪಮಾಗೆ ಸಿನಿಮಾ ಬಗ್ಗೆ ಸಾಕಷ್ಟು ಆಸಕ್ತಿ ಇತ್ತು. ಅವರು 'ಮನಿಯರಳಿಯೆ ಅಶೋಕನ್' ಸಿನಿಮಾಗೆ ಸಹಾಯಕ ನಿರ್ದೇಶಕಿ ಆಗಿ ಕೆಲಸ ಮಾಡಿದ್ದರು. ಈ ಚಿತ್ರದಲ್ಲಿ ಅವರು ಪ್ರಮುಖ ಪಾತ್ರವನ್ನೂ ಮಾಡಿದ್ದರು. ಈ ಚಿತ್ರದ ಮೂಲಕ ಅವರು ಹೊಸ ಅನುಭವ ಪಡೆದರು. ಅನುಪಮಾ ಅವರಿಗೆ ದುಲ್ಖರ್ ಸಲ್ಮಾನ್ ಜೊತೆ ಒಳ್ಳೆಯ ಗೆಳೆತನ ಇದೆ.

ಅನುಪಮಾ ಅವರಿಗೆ ಪ್ರಾಣಿಗಳ ಬಗ್ಗೆ ವಿಶೇಷ ಪ್ರೀತಿ ಇದೆ. ಅವರ ಮನೆಯಲ್ಲಿ ಹಲವು ರೀತಿಯ ಪ್ರಾಣಿಗಳು ಇವೆ. ಇದನ್ನು ಅವರು ಪ್ರೀತಿಯಿಂದ ಸಾಕುತ್ತಾರೆ. ಅನುಪಮಾ ಅವರ ಪರಿಚಯ ಕನ್ನಡಿಗರಿಗೂ ಇದೆ. ಅವರು ಕನ್ನಡದ 'ನಟಸಾರ್ವಭೌಮ' ಚಿತ್ರದಲ್ಲಿ ಪುನೀತ್ ಜೊತೆ ಕಾಣಿಸಿಕೊಂಡಿದ್ದರು. ಈ ಸಿನಿಮಾ ಮೂಲಕ ಅವರು ಗಮನ ಸೆಳೆದರು.




# ಹೆಚ್ಚು ಜಾಹೀರಾತು ಪಿವಿಆರ್‌ಗೆ ದಂಡ

ಪಿವಿಆರ್, ಐನಾಕ್ಸ್ ಇನ್ನಿತರೆ ಮಲ್ಟಿಪ್ಲೆಕ್ಸ್‌ಗಳು ಸಿನಿಮಾಗಳ ಜೊತೆಗೆ ಭರಪೂರವಾಗಿ ಜಾಹೀರಾತುಗಳನ್ನು ಪ್ರೇಕ್ಷಕರಿಗೆ ತೋರಿಸುತ್ತವೆ. ಸಿನಿಮಾಗಳಿಂದ ಮಾತ್ರವಲ್ಲದೆ ಜಾಹೀರಾತು ಪ್ರದರ್ಶನದಿಂದ ಅಷ್ಟೆ ಮೊತ್ತದ ಲಾಭವನ್ನು ಈ ಮಲ್ಟಿಪ್ಲೆಕ್ಸ್‌ಗಳು ಪಡೆಯುತ್ತವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಜಾಹೀರಾತು ಪ್ರದರ್ಶಿಸುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಆಗಾಗ್ಗೆ ಚರ್ಚೆಗಳು ನಡೆಯುತ್ತಲೇ ಇರುತ್ತವೆ ಆದರೆ ಈ ಕಿರಿಕಿರಿಯಂತೂ ನಿಂತಿಲ್ಲ. ಇದೀಗ ಬೆಂಗಳೂರಿನ ವ್ಯಕ್ತಿಯೊಬ್ಬ ಪಿವಿಆರ್‌ನ ವಿರುದ್ಧ ದಾವೆ ಹೂಡಿ ದಂಡ ಕಟ್ಟುವಂತೆ ಮಾಡಿದ್ದಾರೆ.

2024 ರಲ್ಲಿ ಬಿಡುಗಡೆ ಆದ 'ಸ್ಯಾಮ್ ಬಹದ್ದೂರ್' ಸಿನಿಮಾ ನೋಡಲು ಬೆಂಗಳೂರಿನ ಅಭಿಷೇಕ್ ಎಂಆರ್ ಎಂಬುವರು ಬುಕ್‌ಮೈ ಶೋನಲ್ಲಿ ಟಿಕೆಟ್ ಬುಕ್ ಮಾಡಿಕೊಂಡು ಪಿವಿಆರ್-ಐನಾಕ್ಸ್ (ಈಗ ಎರಡು ಒಂದೇ) ಮಲ್ಟಿಪ್ಲೆಕ್ಸ್‌ಗೆ ಹೋಗಿದ್ದರು. ಆದರೆ ಮಲ್ಟಿಪ್ಲೆಕ್ಸ್‌ನವರು ಸತತವಾಗಿ ಜಾಹೀರಾತುಗಳನ್ನು ಹಾಕಿ ಬರೋಬ್ಬರಿ 25 ನಿಮಿಷ ತಡವಾಗಿ ಸಿನಿಮಾ ಪ್ರಾರಂಭ ಮಾಡಿದ್ದಾರೆ. ಇದರಿಂದ, ಅಭಿಷೇಕ್‌ಗೆ ನಿಗದಿತ ಸಮಯಕ್ಕೆ ಕಚೇರಿಗೆ ವಾಪಸ್ ತೆರಳಲು ಸಾಧ್ಯವಾಗಿಲ್ಲ.

ಟಿಕೆಟ್ ಮೇಲೆ ನಮೂದಾಗಿದ್ದ ಸಿನಿಮಾದ ಶೋ ಸಮಯಕ್ಕೂ ನಿಜವಾಗಿ ಸಿನಿಮಾ ಅನ್ನು ಪ್ರಾರಂಭ ಮಾಡಿದ ಸಮಯಕ್ಕೂ ಭಾರಿ ಅಂತರ ಇದ್ದ ಕಾರಣ ಹಾಗೂ ಅನವಶ್ಯಕವಾಗಿ ಅತಿಯಾಗಿ ಜಾಹೀರಾತು ತೋರಿ ತನ್ನ ಸಮಯ ವ್ಯರ್ಥ ಮಾಡಿದ್ದಕ್ಕಾಗಿ ಅಭಿಷೇಕ್ ಅವರು ಗ್ರಾಹಕರ ವೇದಿಕೆಯಲ್ಲಿ ಕೇಸು ದಾಖಲಿಸಿದ್ದರು, ಪ್ರಕರಣದ ವಿಚಾರಣೆ ನಡೆಸಿದ ಗ್ರಾಹಕರ ವೇದಿಕೆ ಇದೀಗ ಪಿವಿಆರ್-ಐನಾಕ್ಸ್, ದೂರುದಾರ ಅಭಿಷೇಕ್‌ಗೆ 28 ಸಾವಿರ ರೂಪಾಯಿ ದಂಡ ಪಾವತಿಸುವಂತೆ ಆದೇಶಿಸಿದೆ. ಅಲ್ಲದೆ, ಇನ್ನು ಮುಂದೆ ನಿಖರವಾಗಿ ಸಿನಿಮಾ ಶೋ ಪ್ರಾರಂಭ ಆಗುವ ಸಮಯವನ್ನೇ ಟಿಕೆಟ್‌ನಲ್ಲಿ ನಮೂದಿಸಬೇಕು, ಜಾಹೀರಾತು ಪ್ರದರ್ಶಿಸುವ ಸಮಯವನ್ನು ನಮೂದಿಸುವಂತೆ ಇಲ್ಲ ಎಂದು ಗ್ರಾಹಕರ ವೇದಿಕೆ ಪಿವಿಆರ್-ಐನಾಕ್ಸ್‌ಗೆ ಸೂಚಿಸಿದೆ.ಈ ಹಿಂದೆ ಸಹ ಪಿವಿಆರ್ ಮೇಲೆ ಇಂಥಹಾ ಪ್ರಕರಣಗಳನ್ನು ದಾಖಲಿಸಲಾಗಿದೆ. ಹೊರಗಡೆಯಿಂದ ತೆಗೆದುಕೊಂಡು ಹೋಗುವ ಆಹಾರ ಮತ್ತು ನೀರಿಗೆ ನಿರ್ಬಂಧ ಹೇರಿರುವ ಬಗ್ಗೆ, ಅತಿಯಾಗಿ ಜಾಹೀರಾತು ಪ್ರದರ್ಶನ ಮಾಡುವ ಬಗ್ಗೆ ಹೀಗೆ ಇನ್ನೂ ಕೆಲವು ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳನ್ನು ಪಿವಿಆರ್ ಮೇಲೆ ಹೂಡಲಾಗಿದೆ. ಆದರೆ ಯಾವುದೂ ಸಹ ಫಲಪ್ರದವಾಗಿಲ್ಲ. ಈಗಲೂ ಸಹ ಬೆಂಗಳೂರು ಸೇರಿದಂತೆ ಕೆಲವು ಮಹಾನಗರಗಳ ಮಲ್ಟಿಪ್ಲೆಕ್ಸ್‌ಗಳಲ್ಲಿ ಹೊರಗಿನಿಂದ ತೆಗೆದುಕೊಂಡು ಹೋಗುವ ಆಹಾರ ಮತ್ತು ನೀರು ನಿರ್ಬಂಧಿಸಲಾಗಿದೆ.

# ಚಾಂಪಿಯನ್ ಟ್ರೋಫಿಗೆ ಇಂದು ಚಾಲನೆ

ಬಹುನಿರೀಕ್ಷಿತ ಐಸಿಸಿ ಚಾಂಪಿಯನ್ ಟ್ರೋಫಿ ಟೂರ್ನಿಯ 9ನೇ ಆವೃತ್ತಿಗೆ ಇಂದು ಚಾಲನೆ ಸಿಗಲಿದೆ. ಮಿನಿ ವಿಶ್ವಕಪ್ ಎಂದೇ ಕರೆಯಲ್ಪಡುವ ಈ ಪಂದ್ಯಾವಳಿಯನ್ನು ಸುಮಾರು ಎಂಟು ವರ್ಷಗಳ ನಂತರ ನಡೆಸಲಾಗುತ್ತಿದೆ. ಐಸಿಸಿ ಈ ಪಂದ್ಯಾವಳಿಯನ್ನು 1998 ರಲ್ಲಿ ಪ್ರಾರಂಭಿಸಿತು. ಚಾಂಪಿಯನ್ಸ್ ಟ್ರೋಫಿಯನ್ನು ಕೊನೆಯ ಬಾರಿಗೆ 2017 ರಲ್ಲಿ ಆಡಲಾಗಿತ್ತು. ಆಗ ಪಾಕಿಸ್ತಾನ ಪ್ರಶಸ್ತಿ ಗೆದ್ದಿತ್ತು. ಈ ಬಾರಿ ಪಾಕಿಸ್ತಾನ ಚಾಂಪಿಯನ್ಸ್ ಟ್ರೋಫಿಯನ್ನು ಆಯೋಜಿಸುತ್ತಿದ್ದು, ಟೂರ್ನಿಯ ಮೊದಲ ಪಂದ್ಯ ಪಾಕಿಸ್ತಾನ ಮತ್ತು ನ್ಯೂಝಿಲೆಂಡ್ ನಡುವೆ ನಡೆಯಲಿದೆ. 2025 ರ ಚಾಂಪಿಯನ್ಸ್ ಟ್ರೋಫಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮ ತ್ತು ನ್ಯೂಝಿಲೆಂಡ್ ಮುಖಾಮುಖಿಯಾಗಲಿವೆ. ಈ ಪಂದ್ಯವು ಕರಾಚಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ಭಾರತೀಯ ಕಾಲಮಾನದ ಪ್ರಕಾರ, ಪಂದ್ಯದ ಟಾಸ್ ಮಧ್ಯಾಹ್ನ 2




ಗಂಟೆಗೆ ನಡೆಯಲಿದ್ದು, ಪಂದ್ಯ ಮಧ್ಯಾಹ್ನ 2:30 ಕ್ಕೆ ಆರಂಭವಾಗಲಿದೆ. ಇತ್ತೀಚೆಗೆ ಪಾಕಿಸ್ತಾನದಲ್ಲಿ ತ್ರಿಕೋನ ಸರಣಿಯನ್ನು ಆಡಲಾಯಿತು, ಇದರಲ್ಲಿ ಪಾಕಿಸ್ತಾನ, ದಕ್ಷಿಣ ಆಫ್ರಿಕಾ ಮತ್ತು ನ್ಯೂಝಿಲೆಂಡ್ ಭಾಗವಹಿಸಿದ್ದವು. ಈ ತ್ರಿಕೋನ ಸರಣಿಯನ್ನು ಕಿವೀಸ್ ತಂಡ ಗೆದ್ದಿತ್ತು.

**ಕರಾಚಿ ಪಿಚ್ ವರದಿ:** ಕರಾಚಿಯ ರಾಷ್ಟ್ರೀಯ ಕ್ರೀಡಾಂಗಣದ ಪಿಚ್ ಬ್ಯಾಟ್ಸ್‌ಮನ್‌ಗಳಿಗೆ ಸೂಕ್ತವಾಗಿದೆ. ಹೈ- ಸ್ಕೋರಿಂಗ್ ಪಂದ್ಯವನ್ನು ಇಲ್ಲಿ ನೋಡಬಹುದು. ಇದೇ ಮೈದಾನದಲ್ಲಿ ಪಾಕಿಸ್ತಾನ ತಂಡ ದಕ್ಷಿಣ ಆಫ್ರಿಕಾ ವಿರುದ್ಧ 353 ರನ್‌ಗಳ ಟಾರ್ಗೆಟ್ ಬೆನ್ನಟ್ಟಿತ್ತು. ಚೇಸಿಂಗ್ ತಂಡಕ್ಕೆ ಗೆಲ್ಲುವ ಹೆಚ್ಚಿನ ಅವಕಾಶವಿರುತ್ತದೆ. ಟಾಸ್ ಗೆದ್ದ ತಂಡ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಬಹುದು. ಈ ಮೈದಾನದಲ್ಲಿ ನಡೆದಿರುವ 78 ಏಕದಿನ ಪಂದ್ಯಗಳಲ್ಲಿ, ಮೊದಲು ಬ್ಯಾಟ್ ಮಾಡಿದ ತಂಡ 36 ಬಾರಿ ಗೆದ್ದಿದ್ದರೆ, ನಂತರ ಬ್ಯಾಟ್ ಮಾಡಿದ ತಂಡ 39 ಬಾರಿ ಗೆದ್ದಿದೆ.



# ಜೈಲರ್ 2ಗೆ ಸೂರ್ಯ ವಿಲನ್

ಸೂಪರ್ ಸ್ಟಾರ್ ರಜನಿಕಾಂತ್ ನಟಿಸಿದ್ದ ಜೈಲರ್ ಚಿತ್ರ 2023 ರಲ್ಲಿ ಬಿಡುಗಡೆಯಾಗಿ ಬ್ಲಾಕ್ ಬಸ್ಟರ್ ಹಿಟ್ ಆಗಿತ್ತು. ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದ ಈ ಚಿತ್ರದಲ್ಲಿ ರಜನಿಕಾಂತ್ ಜೊತೆಗೆ ರಮ್ಯಕೃಷ್ಣ, ವಸಂತ್ ರವಿ, ಮಿರ್ನಾ, ಯೋಗಿಬಾಬು, ಶಿವರಾಜ್ ಕುಮಾರ್, ವಿನಾಯಕನ್, ತಮನ್ನಾ, ಸುನಿಲ್, ರೆಡ್ಡಿನ್ ಕಿಂಗ್ಲಿ ಮುಂತಾದ ದೊಡ್ಡ ತಾರಾಗಣವಿತ್ತು. ಅನಿರುದ್ ಸಂಗೀತ ನೀಡಿದ್ದರು. ಸನ್ ಪಿಕ್ಚರ್ಸ್ ಈ ಚಿತ್ರವನ್ನು ದೊಡ್ಡ ಬಜೆಟ್ ನಲ್ಲಿ ನಿರ್ಮಿಸಿತ್ತು. ದೊಡ್ಡ ನಿರೀಕ್ಷೆಯ ನಡುವೆ ವಿಶ್ವಾದ್ಯಂತ ಬಿಡುಗಡೆಯಾದ ಈ ಚಿತ್ರ ಬಾಕ್ಸ್ ಆಫೀಸ್ ನಲ್ಲಿ 650 ಕೋಟಿಗೂ ಹೆಚ್ಚು ಗಳಿಕೆ ಕಂಡಿತ್ತು. ತೆಲುಗು, ಹಿಂದಿ, ಮಲಯಾಳಂ ಮತ್ತು ಕನ್ನಡ ಭಾಷೆಗಳಲ್ಲೂ ಈ ಚಿತ್ರ ಭರ್ಜರಿ ಯಶಸ್ಸು ಗಳಿಸಿತ್ತು. ಜೈಲರ್ ಚಿತ್ರದ ನಂತರ ರಜನಿಕಾಂತ್ ಈಗ ಲೋಕೇಶ್ ಕನಕರಾಜ್ ನಿರ್ದೇಶನದ ಲಾಲ್ ಸಲಾಮ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ಲಾಲ್ ಸಲಾಮ್ ಚಿತ್ರ ಮುಗಿದ ನಂತರ ರಜನಿ ಜೈಲರ್ 2 ಚಿತ್ರದ ಕೆಲಸ ಶುರು ಮಾಡಲಿದ್ದಾರೆ. ಮೊದಲ ಭಾಗಕ್ಕಿಂತ ಎರಡನೇ ಭಾಗವನ್ನು ಇನ್ನೂ ಅದ್ದೂರಿಯಾಗಿ ಮಾಡಬೇಕೆಂದು ನೆಲ್ಸನ್ ಯೋಚಿಸುತ್ತಿದ್ದಾರೆ. ಮೊದಲ ಭಾಗದಲ್ಲಿ ವಿಲನ್ ಆಗಿ ನಟಿಸಿದ್ದ ವಿನಾಯಕನ್ ಪಾತ್ರ ಕೊನೆಯಲ್ಲಿ ಸಾಯುವುದರಿಂದ, ಎರಡನೇ ಭಾಗದಲ್ಲಿ ಅಷ್ಟೇ ಭಯಾನಕ ವಿಲನ್ ತರಬೇಕೆಂದು ನೆಲ್ಸನ್ ಅಂದುಕೊಂಡಿದ್ದಾರಂತೆ. ಹೊಸ ಸುದ್ದಿಯ ಪ್ರಕಾರ, ಜೈಲರ್ 2 ಚಿತ್ರದಲ್ಲಿ ವಿಲನ್ ಆಗಿ ನಟಿಸಲು ನಟ ಎಸ್. ಜೆ.ಸೂರ್ಯ ಜೊತೆ ಮಾತುಕತೆ ನಡೆಯುತ್ತಿದೆಯಂತೆ. ರಜನಿಕಾಂತ್ ಜೊತೆ ಇದುವರೆಗೆ ಒಟ್ಟಿಗೆ ನಟಿಸದ ಎಸ್.ಜೆ.ಸೂರ್ಯ, ಜೈಲರ್ 2 ಮೂಲಕ ಮೊದಲ ಬಾರಿಗೆ ಒಟ್ಟಿಗೆ ನಟಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಕಾಂಬಿನೇಷನ್ ಫಿಕ್ಸ್ ಆದರೆ ಜೈಲರ್ 2 ಚಿತ್ರ ಬೇರೆ ಲೆವೆಲ್ ನಲ್ಲಿ ಇರುತ್ತೆ ಅಂತ ಖಚಿತವಾಗ್ತಿದೆ. ಇತ್ತೀಚೆಗೆ ರಾಮ್ ಚರಣ್ ಅವರ ಗೇಮ್ ಚೇಂಜರ್ ಚಿತ್ರದಲ್ಲಿ ಪವರ್ ಫುಲ್ ವಿಲನ್ ಆಗಿ ನಟಿಸಿ ಮೆಚ್ಚುಗೆ ಗಳಿಸಿದ್ದರು ಸೂರ್ಯ. ಸೂಪರ್ ಸ್ಟಾರ್ ಚಿತ್ರದಲ್ಲಿ ನಟಿಸುತ್ತಾರೋ ಇಲ್ವೋ ನೋಡಬೇಕು.

# ಮೈಸೂರಲ್ಲಿ ಕಿಚ್ಚನ ಕ್ರಿಕೆಟ್ ದಸರಾ

ವಾರಾಂತ್ಯದಲ್ಲಿ ನಡೆಯುತ್ತಿರುವ 11ನೇ ಆವೃತ್ತಿಯ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಪಂದ್ಯದಿಂದ ಪಂದ್ಯಕ್ಕೆ ತನ್ನ ಜನಪ್ರಿಯತೆಯನ್ನು ದ್ವಿಗುಣಗೊಳಿಸಿಕೊಳ್ಳುತ್ತಿದೆ. ಇದಕ್ಕೆ ಕಾರಣ ಯಾವ ಐಪಿಎಲ್‌ಗೂ ಕಡಿಮೆ ಇಲ್ಲದಂತಹ ಪ್ರದರ್ಶನ ಸಿನಿ ತಾರೆಯಿಂದ ಹೊರಬರುತ್ತಿರುವುದು. ಬ್ಯಾಟಿಂಗ್, ಬೌಲಿಂಗ್ ಹಾಗೂ ಫಿಲ್ಡಿಂಗ್‌ನಲ್ಲೂ ಯಾವ ವೃತ್ತಿಪರ ಕ್ರಿಕೆಟರ್‌ಗೂ ಕಡಿಮೆ ಇಲ್ಲದಂತಹ ಪ್ರದರ್ಶನ ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನಲ್ಲಿ ಕಂಡುಬರುತ್ತಿದೆ. ಇದೇ ಕಾರಣಕ್ಕೆ ಪ್ರತಿ ಪಂದ್ಯಕ್ಕೂ ಕ್ರೀಡಾಂಗಣಗಳು ಕಿಕ್ಕಿರಿದು ತುಂಬುತ್ತಿವೆ. ಅದರಲ್ಲೂ ಜನಪ್ರಿಯ ನಟರಿಂದಲೇ ತುಂಬಿ ತುಳುಕುತ್ತಿರುವ ಕರ್ನಾಟಕ ಬುಲ್ಡೋಜರ್ಸ್ ತಂಡ ಕಿಚ್ಚ ಸುದೀಪ್ ನಾಯಕತ್ವದಲ್ಲಿ ಅಜೇಯ ಓಟವನ್ನು ಮುಂದುವರೆಸಿರುವುದು ಕರ್ನಾಟಕದಲ್ಲಿ ಈ ಲೀಗ್‌ಗೆ ಇನ್ನಷ್ಟು ಮನ್ನಣೆ ಸಿಗುವಂತೆ ಮಾಡಿದೆ. ಈ ನಡುವೆ ಕನ್ನಡದ ಸಿಸಿಎಲ್ ಪ್ರಿಯರಿಗೆ ಸಂತಸ ಸುದ್ದಿಯೊಂದು ಸಿಕ್ಕಿದ್ದು, ಈ ಲೀಗ್‌ನ ಸೆಮಿ ಫೈನಲ್ ಹಾಗೂ ಫೈನಲ್ ಪಂದ್ಯಗಳಿಗೆ ಮೈಸೂರು ಆತಿಥ್ಯವಹಿಸಲಿದೆ. ಸ್ವತಃ ಈ ವಿಚಾರವನ್ನು ಕರ್ನಾಟಕ ಬುಲ್ಡೋಜರ್ಸ್ ತಂಡದ ನಾಯಕ ಕಿಚ್ಚ ಸುದೀಪ್ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಳ್ಳುವ ಮೂಲಕ ಮಾಹಿತಿ ನೀಡಿದ್ದಾರೆ.

**ಕಿಚ್ಚನ ಒತ್ತಡಕ್ಕೆ ಮಣಿದ ಆಯೋಜಕರು:** ವಾಸ್ತವವಾಗಿ ಈ ಬಾರಿಯ ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನ ವೇಳಾಪಟ್ಟಿಯಲ್ಲಿ ಲೀಗ್ ಹಂತದ ಪಂದ್ಯಗಳಿಗೆ ಮಾತ್ರ ಸ್ಥಳವನ್ನು ನಿಗದಿಪಡಿಸಲಾಗಿತ್ತು. ಉಳಿದಂತೆ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳಿಗೆ ಸ್ಥಳ ನಿಗದಿಪಡಿಸಲಾಗಿರಲಿಲ್ಲ. ಆದರೆ ವರದಿಯ ಪ್ರಕಾರ ಈ ಲೀಗ್‌ನ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳನ್ನು ಕೊಯಮತ್ತೂರು ಹಾಗೂ ಸೇಲಂನಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಆಯೋಜಕರ ಎದುರು ಪಟ್ಟು ಹಿಡಿದು ಕುಳಿತ ಕಿಚ್ಚ ಸುದೀಪ್ ಕೊನೆಗೂ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದು, ಈ ಬಾರಿಯ ಸಿಸಿಎಲ್ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ಕರ್ನಾಟಕದಲ್ಲಿ ಅದರಲ್ಲೂ ಮೈಸೂರಿನಲ್ಲಿ ನಡೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.ವಾಸ್ತವವಾಗಿ ಉದ್ಘಾಟನಾ ಪಂದ್ಯವನ್ನೂ ಈ ಮೊದಲು ಹೈದರಾಬಾದ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಆಗಲೂ ಆಯೋಜಕರ ಮುಂದೆ ಕುಳಿತಿದ್ದ ಕಿಚ್ಚ ಉದ್ಘಾಟನಾ ಪಂದ್ಯವನ್ನು ಬೆಂಗಳೂರಿಗೆ ಸ್ಥಳಾಂತರಿಸುವಲ್ಲಿ ಯಶಸ್ವಿಯಾಗಿದ್ದರು. ಆ ಬಳಿಕ ಕಿಚ್ಚನ ಈ ಶ್ರಮಕ್ಕೆ ಪ್ರತಿಫಲವಾಗಿ ಉದ್ಘಾಟನಾ ಪಂದ್ಯದ ಎಲ್ಲಾ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿ ಇಡೀ ಕ್ರೀಡಾಂಗಣವೇ ಪ್ರೇಕ್ಷಕರಿಂದ ತುಂಬಿ ತುಳುಕಿತ್ತು. ಇದೀಗ ಮೈಸೂರಿನಲ್ಲಿ ನಡೆಯುವ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಕ್ಕೂ ಇದೇ ರೀತಿಯ ಪ್ರೋತ್ಸಾಹ ಸಿಗುವ ನಿರೀಕ್ಷೆಯಲ್ಲಿ ಕರ್ನಾಟಕ ಬುಲ್ಡೋಜರ್ಸ್ ತಂಡವಿದೆ.

**ಮೊದಲ ಬಾರಿಗೆ ಮೈಸೂರಿನಲ್ಲಿ ಸಿಸಿಎಲ್:** ಕಿಚ್ಚನ ಈ ಮನವಿಗೆ ಕಾರಣವೂ ಇದ್ದು, ಈ ಲೀಗ್‌ನಲ್ಲಿ ಈಗಾಗಲೇ ಮೂರು ಪಂದ್ಯಗಳನ್ನು ಆಡಿರುವ ಕರ್ನಾಟಕ ಬುಲ್ಡೋಜರ್ಸ್ ತಂಡ ಆಡಿರುವ ಮೂರು ಪಂದ್ಯಗಳನ್ನು ಭರ್ಜರಿಯಾಗಿ ಗೆದ್ದುಕೊಂಡು ನಾಕೌಟ್ ಸುತ್ತಿಗೆ ಭಾಗಶಃ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಹೀಗಾಗಿ ಕನ್ನಡಿಗರ ಬೆಂಬಲದೊಂದಿಗೆ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯವನ್ನು ಆಡಬೇಕೆಂಬ ಇರಾದೆ ಕಿಚ್ಚ ಸುದೀಪ್ ಅವರದ್ದು. ಅದರಂತೆ ಕಿಚ್ಚನ ಮನವಿಗೆ ಒಪ್ಪಿಗೆ ಸೂಚಿಸಿರುವ ಆಯೋಜಕರು ಮೈಸೂರಿನಲ್ಲಿ ಸಿಸಿಎಲ್ ನಾಕೌಟ್ ಪಂದ್ಯಗಳನ್ನು ಆಯೋಜಿಸುತ್ತಿದ್ದಾರೆ. ಈ ಮೂಲಕ 11 ಆವೃತ್ತಿಗಳಲ್ಲಿ ಇದೇ ಮೊದಲ ಬಾರಿಗೆ ಮೈಸೂರಿನಲ್ಲಿ ಸಿಸಿಎಲ್ ಪಂದ್ಯಗಳು ನಡೆಯಲ್ಲಿವೆ. ಅದರಲ್ಲೂ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ನಡೆಯುತ್ತಿರುವುದು ಮೈಸೂರಿನ ಜನತೆಗೆ ಎರಡನೇ ದಸರಾದ ರಂಗು ತರುವುದರಲ್ಲಿ ಯಾವುದೇ ಅನುಮಾನವಿಲ್ಲ.

**ಮಾಹಿತಿ ನೀಡಿದ ಕಿಚ್ಚ ಸುದೀಪ್:** ಇನ್ನು ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಕಿಚ್ಚ ಸುದೀಪ್, ಮೈಸೂರಿನಲ್ಲಿ ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ನಡೆಯಲ್ಲಿವೆ ಎಂಬುದನ್ನು ತಿಳಿಸಲು ಸಂತೋಷವಾಗುತ್ತಿದೆ. ಸಿಸಿಎಲ್ ನಾಕೌಟ್ ಸುತ್ತಿನ ಪಂದ್ಯಗಳು ಅಂದರೆ ಸೆಮಿಫೈನಲ್ ಪಂದ್ಯಗಳು ಮಾ. 1 ರಂದು ಹಾಗೂ ಫೈನಲ್ ಪಂದ್ಯ ಮಾ.2 ರಂದು ನಡೆಯಲ್ಲಿವೆ. ಮೈಸೂರಿನಲ್ಲಿ ಈ ನಾಕೌಟ್ ಪಂದ್ಯಗಳನ್ನು ಆಯೋಜಿಸಲು ಅನುವು ಮಾಡಿಕೊಟ್ಟ ಸಿಸಿಎಲ್ ಹಾಗೂ ಕೆಎಸ್‌ಸಿಎಗೆ ಧನ್ಯವಾದಗಳು. ನಾವು ನಿಮ್ಮೆಲ್ಲರನ್ನೂ ಅಲ್ಲಿ ನೋಡಲು ಎದುರು ನೋಡುತ್ತಿದ್ದೇವೆ. ಟಿಕೆಟ್‌ಗಳ ಲಭ್ಯತೆ ಮತ್ತು ಆನ್‌ಲೈನ್ ಮಾರಾಟ ಶೀಘ್ರದಲ್ಲೇ ಪ್ರಾರಂಭವಾಗಲಿದೆ ಎಂಬ ಮಾಹಿತಿ ನೀಡಿದ್ದಾರೆ.




ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: **944807487**